EMAIL : dairyadadaari@gmail.com
ಸಂಪುಟ: 01 ಸಂಚಿಕೆ: 108
ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER
ಬೆಲೆ ರೂ : 2.00
ರಾಯಚೂರು
ಪುಟ: 4
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795
ಶನಿವಾರ: 04-04-2026

# ಭಾರತ ಜನಗಣತಿ 2027:

## ಗಣತಿದಾರರು-ಮೇಲ್ವಿಚಾರಕರಿಗೆ ಮೂರು ದಿನಗಳ ತರಬೇತಿ ಆರಂಭ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಕಾಕತೀಯ ವಿದ್ಯಾಸಂಸ್ಥೆಯಲ್ಲಿ ನಡೆದ ಜನಗಣತಿದಾರರ ತರಬೇತಿ ಕಾರ್ಯಕ್ರಮಕ್ಕೆ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಚಾಲನೆ ನೀಡಿ ಮಾತನಾಡಿ ದೇಶದ ಅಭಿವೃದ್ದಿಗೆ ವಿವಿಧ ಯೋಜನೆಗಳನ್ನು ರೂಪಿಸುವುದಕ್ಕಾಗಿ ಪ್ರತಿ 10 ವರ್ಷಗಳಿಗೆ ಒಮ್ಮೆ ಜನಗಣತಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸುತ್ತವೆ. ಅದ್ದರಿಂದ ಜನಗಣತಿಯಲ್ಲಿ ಭಾಗವಹಿಸುವ ಗಣತಿದಾರರು ನಿಖರವಾದ ಅಂಶಗಳನ್ನು ದಾಖಲಿಸುವ ಮೂಲಕ ಜನಗಣತಿಯನ್ನು ಯಶಸ್ವಿಗೊಳಿಸುವಂತೆ ಕೋರಿದರು.

ಮಾನ್ವಿ ತಾಲೂಕು ಗ್ರಾಮೀಣ ಭಾಗದ ಚಾರ್ಜ್ ಅಧಿಕಾರಿ ಹಾಗೂ ತಹಶಿಲ್ದಾರ್ ಭೀಮರಾಯ ಬಿ ರಾಮಸಮುದ್ರ ಮಾತನಾಡಿನಮ್ಮ ಗಣತಿ ನಮ್ಮ ಅಭಿವೃದ್ದಿ ಘೋಷ ವಾಕ್ಯದೊಂದಿಗೆ ಸ್ವಯಂ ಗಣತಿಯನ್ನು ಏ.1ರಿಂದ ಪ್ರಾರಂಭಿಸಲಾಗಿದ್ದು ಸಾರ್ವಜನಿಕರು ತಮ್ಮ 34 ಅಂಶಗಳ ಮಾಹಿತಿಯನ್ನು ಸ್ವಯಂ ತಮ್ಮ ಮೋಬೈಲ್ ಮೂಲಕ ದಾಖಲಿಸಿಕೊಳ್ಳಬಹುದಾಗಿದೆ ಮಾನ್ವಿ ತಾಲೂಕಿನಲ್ಲಿ ಜನಗಣತಿದಾರರಿಗೆ ಏ.3,4 ಹಾಗೂ 10 ರಂದು ತರಬೇತಿ ನೀಡಲಾಗುವುದು. ಜನಗಣತಿದಾರರು ಏ.16ರಿಂದ ಮೇ.15 ರವರಿಗೆ ತಾಲೂಕಿನ ಎಲ್ಲಾ 78 ಗ್ರಾಮಗಳಲ್ಲಿ ಹಾಗೂ ಮಾನ್ವಿ ಪಟ್ಟಣದಲ್ಲಿ ಮನೆ ಮನೆಗೆ ತೆರಳಿ ಗಣತಿ ನಡೆಸಲಿದ್ದಾರೆ. ಮಾನ್ವಿ ಪಟ್ಟಣದ ಜನಗಣತಿಯ ಚಾರ್ಜ ಅಧಿಕಾರಿಯಾಗಿ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ ಕಾರ್ಯನಿರ್ವಹಿಸಲಿದ್ದಾರೆ. ಗ್ರಾಮೀಣ ಭಾಗದಲ್ಲಿ 247 ಗಣತಿದಾರರು ಹಾಗೂ 25 ಕಾಯ್ದಿರಿಸಿದ ಗಣತಿದಾರರು, 43 ಸೂಪರ್ ವೈಸರ್,5 ಕಾಯ್ದಿರಿಸಿದ ಸೂಪರ್ ವೈಸರ್ ,5 ಮಾಸ್ಟರ್ ತರಬೇತಿದಾರರು, ಮಾನ್ವಿ ಪಟ್ಟಣದಲ್ಲಿ 87 ಗಣತಿದಾರರು ಹಾಗೂ 8 ಕಾಯ್ದಿರಿಸಿದ ಗಣತಿದಾರರು, 14 ಸೂಪರ್ ವೈಸರ್,2 ಕಾಯ್ದಿರಿಸಿದ ಸೂಪರ್ ವೈಸರ್ ,5 ಮಾಸ್ಟರ್ ತರಬೇತಿದಾರರು ಜನಗಣತಿಯ ಕಾರ್ಯದಲ್ಲಿ ಭಾಗವಹಿಸಲಿದ್ದಾರೆ. ಉತ್ತಮ ತರಬೇತಿ ಪಡೆದ ಗಣತಿದಾರರಿಗೆ ಹಾಗೂ ಉತ್ತಮ ಗಣತಿ ಕಾರ್ಯ ನಿರ್ವಹಿಸಿದ ಗಣತಿದಾರರಿಗೆ ಮೇಲ್ವಿಚಾರಕರಿಗೆ ಸನ್ಮಾನಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ಜನಗಣತಿಯಲ್ಲಿ ಭಾಗವಹಿಸಿಸುವ ಗಣತಿದಾರರಿಗೆ ಗಣತಿ ಕಿಟ್‌ಗಳನ್ನು ವಿತರಿಸಲಾಯಿತು.

ಶಾಸಕ ಹಂಪಯ್ಯನಾಯಕ, ಗ್ಯಾರಂಟಿ ಸಮಿತಿಯ ಅಧ್ಯಕ್ಷರಾದ ಅಂಬರೇಶಪ್ಪ,ಬಿ.ಕೆ,ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್, ತಾಲೂಕು ಪಂಚಾಯಿತಿ ಇ.ಓ. ಖಾಲಿದ್ ಅಹ್ಮದ್, ಪಿ.ಐ. ಸೋಮಶೇಖರ ಎಸ್.ಕೆಂಚರೆಡ್ಡಿ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ,ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ, ಮುಖಂಡರಾದ ಶಿವಮೂರ್ತಿ,ಅಮರೇಗೌಡ,ಶರಣಯ್ಯನಾಯಕ ಗುಡದಿನ್ನಿ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

# ಏ.7 ರಂದು ಪಟ್ಟಣಕ್ಕೆ ಶಂಕರ ಬಿದರಿ ನಿವೃತ್ತ ಐ.ಜಿ.ಪಿ.ರವರು ಆಗಮಿಸಲಿದ್ದಾರೆ: ಅರುಣಕುಮಾರ ಚಂದಾ




ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪತ್ರಿಕಾ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ.ಅಧ್ಯಕ್ಷರಾದ ಅರುಣಕುಮಾರ ಚಂದಾ ಮಾತನಾಡಿ ಏ.5 ರಂದು ಬೆಳಿಗ್ಗೆ 11 ಕ್ಕೆ ಪಟ್ಟಣದ ಸಿದ್ದರ್ಥ ಕಾಲೇಜಿನಲ್ಲಿ ನಡೆಯುವ ಬೇಸಿಗೆ ತರಬೇತಿ ಶಿಬಿರಕ್ಕೆ ಸಚಿವ ಎನ್.ಎಸ್.ಬೋಸರಾಜು ರವರು ಚಾಲನೆ ನೀಡಲಿದ್ದಾರೆ. ಏ.7 ರಂದು ಬೆಳಿಗ್ಗೆ ಮಾನ್ವಿ ಪಟ್ಟಣಕ್ಕೆ ಆಗಮಿಸುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಬೆಂಗಳೂರು ರಾಜ್ಯಾಧ್ಯಕ್ಷರಾದ ಶಂಕರ ಬಿದರಿ ನಿವೃತ್ತ ಐ.ಜಿ.ಪಿ. ರವರನ್ನು ಸಮಾಜದಿಂದ ಭವ್ಯವಾಗಿ ಸ್ವಾಗತಿಸಲಾಗುವುದು ಶಂಕರ ಬಿದರಿರವರು ಮಾನ್ವಿ ಪಟ್ಟಣದಲ್ಲಿನ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಕಚೇರಿಗೆ ಭೇಟಿ ನೀಡಿ ಸದಸ್ಯರೊಂದಿಗೆ ಹಾಗೂ ಸಮಾಜದ ಗಣ್ಯರೊಂದಿಗೆ ಚರ್ಚೆ ನಡೆಸಲಿದ್ದಾರೆ. ನಂತರ ಮಧ್ಯಾಹ್ನ 2 ಕ್ಕೆ ಹಿರಿಯ ವಕೀಲರಾದ ಸಿದ್ದಲಿಂಗಪ್ಪ ರವರ ನಿವಾಸದಲ್ಲಿ ಸಮಾಜದವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಸಂಜೆ 5ಕ್ಕೆ ತಾಲೂಕಿನ ಅಡವಿ ಅಮರೇಶ್ವರ ಗ್ರಾಮದಲ್ಲಿನ ಸುವರ್ಣಗಿರಿ ವಿರಕ್ತಮಠ ಶ್ರೀ ಅಡವಿ ಅಮರೇಶ್ವರ ಮಠದಲ್ಲಿ 72 ನೇ ಜಾತ್ರ ಮಹೋತ್ಸವದ ಅಂಗವಾಗಿ ನಡೆಯುವ ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿಯ ಶ್ರೀ ಡಾ.ಸಿದ್ದಲಿಂಗ ಮಹಾಸ್ವಾಮಿಗಳ ಗುರುವಂದನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸುವರ್ಣಗಿರಿ ವಿರಕ್ತಮಠ ಶ್ರೀ ಅಡವಿ ಅಮರೇಶ್ವರ ಮಠದ ಶ್ರೀ ತೊಂಟದಾರ್ಯ ಮಹಾಸ್ವಾಮಿಗಳಿಂದ ಮಹಾರಥೋತ್ಸವಕ್ಕೆ ಚಾಲನೆ ಹಾಗೂ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನದರ್ಶನ ಪ್ರವಚನ ಮಹಾಮಂಗಲ ಕಾರ್ಯಕ್ರಮ , ಜಾನುವಾರುಗಳ ಜಾತ್ರೆ ಅಂಗವಾಗಿ ಎತ್ತುಗಳಿಂದ ಭಾರ ಎಳೆಯುವ ಸ್ಪರ್ಧೆ ಏರ್ಪಡಿಸಲಾಗಿದೆ ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಶ್ರೀಗಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಕಾರ್ಯಕರಿಣಿ ಸದಸ್ಯರಾದ ಸಿದ್ದಲಿಂಗಪ್ಪ ವಕೀಲರು, ತಾಲೂಕು ವೀರಶೈವಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್, ಗೌ.ಅಧ್ಯಕ್ಷರಾದ ಶ್ರೀಧರಸ್ವಾಮಿ,ತಿಮ್ಮರೆಡ್ಡಿ ಭೋಗವತಿ, ಜಗದೀಶ ಓತ್ತೂರು,ಗುರುಸಿದ್ದಪ್ಪ ಕಣ್ಣೂರು, ವೀರನಗೌಡ ವಕೀಲರು,ಮಲ್ಲನಗೌಡ ನಕ್ಕುಂದಿ ವಕೀಲರು.ಶಂಕರಪ್ಪ ಸೇರಿದಂತೆ ಸಮಾಜದ ಮುಖಂಡರು ಇದ್ದರು.

# ಕೆ.ಹೊಸಹಳ್ಳಿ ಗ್ರಾಮದ ಡೇರೆದ ನಾಗಲಿಂಗೇಶ್ವರ ಜಾತ್ರಾ ಮಹೋತ್ಸವ

ಧೈರ್ಯದ ದಾರಿ

**ಸಿಂಧನೂರು:** ತಾಲೂಕಿನ ತುರವಿಹಾಳ ಸಮೀಪದ ಕೆ ಹೊಸಹಳ್ಳಿ ಗ್ರಾಮದಲ್ಲಿ ಗುರುವಾರ ಡೇರೆದ ನಾಗಲಿಂಗೇಶ್ವರ ಜಾತ್ರಾ ಮಹೋತ್ಸವದ ಅದ್ದೂರಿಯಾಗಿ ಜರುಗಿತು.ಜಾತ್ರಾ ಮಹೋತ್ಸವ ಅಂಗವಾಗಿ ಮಹಿಳೆಯರ ಕುಂಭಕಳಸ ಡೊಳ್ಳು,ವಾದ್ಯಗಳೊಂದಿಗೆ ಭಾಗವಹಿಸಿ ಸಂಭ್ರಮಿಸಿದರು.ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ 121 ಕುಂಭಗಳಿಗೆ ಗ್ರಾಮದ ಪೂಜ್ಯರಿಂದ ಪೂಜೆ ಸಲ್ಲಿಸಿ ಜಾತ್ರೆಗೆ ಚಾಲನೆ ನೀಡಲಾಯಿತು.

ವಿಶೇಷ ಉತ್ಸಾಹದೊಂದಿಗೆ ಪಾಲ್ಗೊಂಡ ಮಹಿಳೆಯರು ಗ್ರಾಮದ ಸುರಕ್ಷೆ ಮತ್ತು ಸಮೃದ್ಧಿಯ ಸಂಕಲ್ಪದೊಂದಿಗೆ ಪಲ್ಲಕ್ಕಿ ಉತ್ಸವ,ರಥದ ಕಳಸವನ್ನು ಪೂಜ್ಯರ ನೇತೃತ್ವದಲ್ಲಿ 101 ಕುಂಭಗಳನ್ನು ಗ್ರಾಮದಲ್ಲಿ ಭವ್ಯ ಮೆರವಣಿಗೆಯ ಮೂಲಕ ಹೊತ್ತುಕೊಂಡು ಬಂದು ಜಾತ್ರಾ ಮಹೋತ್ಸವಕ್ಕೆ ಮೆರುಗು ತಂದರು.ಸಾಯಂಕಾಲ ಕಳಸ,ಪಲ್ಲಕ್ಕಿ ಉತ್ಸವದೊಂದಿಗೆ ಶ್ರೀನಾಗಲಿಂಗೇಶ್ವರ ದೇವಸ್ಥಾನ ತಲುಪುತ್ತಿದ್ದಂತೆ ರಥೋತ್ಸವವು ಪ್ರಾರಂಭವಾಯಿತು.

ಗುರುವಾರ ಬೆಳಗ್ಗೆಯಿಂದಲೇ ಆರಂಭವಾದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರೆದಿದ್ದ ಭಕ್ತರನ್ನು ಮಂತ್ರ ಮುಗ್ಧರನ್ನಾಗಿಸಿದರೆ ಗ್ರಾಮದ ಆರಾಧ್ಯ ದೈವ ನಾಗಲಿಂಗೇಶ್ವರ ಮೂರ್ತಿಗೆ ಮಾಡಲಾಗಿದ್ದ ಅಭಿಷೇಕ, ಪುಷ್ಪರ್ಚನೆ ಮತ್ತು ಬಣ್ಣ ಬಣ್ಣದ ಲೈಟ್ ಗಳಿಂದ ಕಂಗೊಳಿಸುತ್ತಿದ್ದ ದೇವಸ್ಥಾನ ಬಂದ ಭಕ್ತಾದಿಗಳನ್ನು ಕೈಬೀಸಿ ಕರೆಯುವಂತಿತ್ತು.ಸಾವಿರಾರು ಭಕ್ತಾದಿಗಳು ರಥಕ್ಕೆ ಹೂ ಹಣ್ಣು ಉತ್ತತ್ತಿ ಎಸೆದು ದೇವರಿಗೆ ಹರಕೆಗಳನ್ನು ಹೊತ್ತು ಧಿರ್ಘದಂಡ ನಮಸ್ಕಾರ ಹಾಕುವ ಮೂಲಕ ತಮ್ಮ ಇಷ್ಟಾರ್ಥಗಳ ಬೇಡಿಕೆಗಳನ್ನು ಈಡೇರಿಸುವಂತೆ ಮೊರೆ ಇಟ್ಟರು. ವಿಶೇಷವಾಗಿ ದೇವಸ್ಥಾನ ವತಿಯಿಂದ ಜಾತ್ರೆಗೆ ಆಗಮಿಸಿದ ಭಕ್ತಾಧಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಯಿತು. ಈ ಸಂಧರ್ಭದಲ್ಲಿ ಊರಿನ ಪರಮ ಪೂಜ್ಯರು,ಗುರು ಹಿರಿಯರು, ಮಹಿಳೆಯರು, ಯುವಕ ಯುವ ತಿಯರು ಹಾಗೂ ಪೊಲೀಸ್ ಸಿಬ್ಬಂದಿಗಳು, ಜೆಸ್ಕಾಂ ಸಿಬ್ಬಂದಿಗಳು,ಕೆ. ಹೊಸಹಳ್ಳಿ ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರು,ಸುತ್ತಮು ತ್ತಲಿನ ಗ್ರಾಮಸ್ಥರು ಭಾಗವಹಿಸಿ ಸಂಭ್ರಮದಿಂದ ಪಾಲ್ಗೊಂಡಿದ್ದರು.




# ದೇವದುರ್ಗ ಪಟ್ಟಣದಲ್ಲಿ ಉಚಿತ ಸೈನಿಕರ ತರಬೇತಿ

ಧೈರ್ಯದ ದಾರಿ

**ಅರಕೇರಾ:** ಸೈನಿಕ ಅಕಾಡೆಮಿ ದೇವದುರ್ಗದಿಂದ ಅಗ್ನಿವೀರ, ಆರ್ಮಿ, ಪೋಲೀಸ್ ಹಾಗೂ ಪಿ.ಎಸ್.ಐ. ಹುದ್ದೆಗೆ ನೇಮಕ ಬಯಸುವ ಯುವಕರಿಗೆ ಉಚಿತ ತರಬೇತಿ ನೀಡುವ ಶಿಬಿರವನ್ನು ಆಯೋಜಿಸಲಾಗುತ್ತಿದೆ ಎಂದು ಸೈನಿಕ ಅಕಾಡೆಮಿಯ ಅಧ್ಯಕ್ಷ ಭಾನು ಪ್ರಕಾಶ ಖೇಣೇದ್ ತಿಳಿಸಿದರು.

ಪಟ್ಟಣದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸೈನಿಕ ಅಕಾಡೆಮಿಯಿಂದ ದೇವದುರ್ಗದಲ್ಲಿ ಕಳೆದ 6 ವರ್ಷಗಳಿಂದ ಉಚಿತ ತರಬೇತಿ ನೀಡುತ್ತಿದ್ದು, ಸುಮಾರು 20 ಯುವಕರು ಸೈನಿಕರಾಗಿ ಆಯ್ಕೆಗೊಂಡಿದ್ದಾರೆ. ಸೈನಿಕರಾಗಲು ಬಯಸುವ ಯುವಕರಿಗೆ ಸರಕಾರಿ ಬಾಲಕಿಯರ ಪ್ರೌಢ ಶಾಲಾ ಆವರಣದಲ್ಲಿ ( ಬಸ್ ನಿಲ್ದಾಣದ ಹತ್ತಿರ) ಏ.5 ರಂದು ದೈಹಿಕ ಮತ್ತು ಪ್ರವೇಶ (ಸಿ.ಇ.ಟಿ) ಪರೀಕ್ಷೆಗಳನ್ನು ನಡೆಸಿ ತರಬೇತಿಗೆ ಆಯ್ಕೆ ಮಾಡಲಾಗುವುದು ಎಂದು ಸೈನಿಕ ಅಕಾಡೆಮಿಯ ಅಧ್ಯಕ್ಷ ಭಾನುಪ್ರಕಾಶ ಖೇಣೇದ್ ತಿಳಿಸಿದರು.

ಈ ಸಂದರ್ಭದಲ್ಲಿ ತರಬೇತಿದಾರ ಪಂಪಣ್ಣ ಅಕ್ಕರಕಿ, ಮಾರ್ಗದರ್ಶಕ ಡಾ.ಸುಭಾಷ್‌ಚಂದ್ರ ಪಾಟೀಲ್ ಇದ್ದರು.




# ಮಾನ್ವಿ ಬಸ್ ನಿಲ್ದಾಣದಲ್ಲಿ ಉಚಿತ ಕುಡಿಯುವ ನೀರು: ಮೇಕೋ ಕನ್ಸಟ್ರಕ್ಷನ್ಸ್ ಮಾನವೀಯ ಸೇವೆ



ಧೈರ್ಯದ ದಾರಿ

**ಮಾನ್ವಿ:** ಬೇಸಿಗೆಯ ತೀವ್ರ ಬಿಸಿಲಿನ ನಡುವೆಯೂ ಸಾರ್ವಜನಿಕರಿಗೆ ತಂಪಾದ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಮೇಕೋ ಕನ್ಸಟ್ರಕ್ಷನ್ಸ್ ಸಂಸ್ಥೆಯವರು ಶ್ಲಾಘನೀಯ ಕಾರ್ಯಕ್ಕೆ ಕೈಹಾಕಿದ್ದಾರೆ. ಪಟ್ಟಣದ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದಲ್ಲಿ ಉಚಿತ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ವ್ಯವಸ್ಥೆಯನ್ನು ಆರಂಭಿಸಲಾಗಿದ್ದು, ತಹಶೀಲ್ದಾರ ಭೀಮರಾಯ ಬಿ. ರಾಮಸಮುದ್ರ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮೇಕೋ ಕನ್ಸಟ್ರಕ್ಷನ್ಸ್ ಸಂಸ್ಥೆಯವರು ಹಲವು ವರ್ಷಗಳಿಂದ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡು, ವಿಶೇಷವಾಗಿ ಬೇಸಿಗೆಯ ಸಂದರ್ಭದಲ್ಲಿ ತಂಪಾದ ಮತ್ತು ಶುದ್ಧ ಕುಡಿಯುವ ನೀರನ್ನು ಒದಗಿಸುತ್ತಿರುವುದು ಪ್ರಶಂಸನೀಯ ಕಾರ್ಯವಾಗಿದೆ ಎಂದು ಹೇಳಿದರು. ಈ ಬಾರಿ ಹೆಚ್ಚಿನ ಉಷ್ಣಾಂಶ ಇರುವುದರಿಂದ, ಬಸ್ ನಿಲ್ದಾಣಕ್ಕೆ ದಿನನಿತ್ಯ ಆಗಮಿಸುವ ಪ್ರಯಾಣಿಕರಿಗೆ ಇದು ದೊಡ್ಡ ನೆರವಾಗಲಿದೆ ಎಂದು ತಿಳಿಸಿದರು.

ಪ್ರತಿ ದಿನ ನೂರಾರು ಮಂದಿ ಪ್ರಯಾಣಿಕರು ಬಸ್ ನಿಲ್ದಾಣವನ್ನು ಉಪಯೋಗಿಸುತ್ತಾರೆ. ವೃದ್ಧರು, ಮಹಿಳೆಯರು ಹಾಗೂ ಮಕ್ಕಳಿಗೆ ಬಿಸಿಲಿನ ಸಮಯದಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗುವ ಸಾಧ್ಯತೆ ಇರುತ್ತದೆ. ಇಂತಹ ಸಂದರ್ಭಗಳಲ್ಲಿ ಈ ಉಚಿತ ನೀರಿನ ವ್ಯವಸ್ಥೆ ಅವರ ದಾಹವನ್ನು ನೀಗಿಸುವುದಲ್ಲದೆ, ಆರೋಗ್ಯದ ದೃಷ್ಟಿಯಿಂದಲೂ ಸಹಾಯಕರವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಡಾ. ಎಂ. ವಸಂತ ಕುಮಾರ, ಡಾ. ಪೂಜಾ ಎಂ. ಶಿವಕುಮಾರ, ಮಲ್ಲಪ್ಪ ಚೀಕಲಪರ್ವಿ, ರಾಮಕೃಷ್ಣ, ರವಿಕುಮಾರ ಹಾಗೂ ಬಸ್ ನಿಲ್ದಾಣದ ನಿಯಂತ್ರಕರಾದ ರಾಮಾಂಜನೇಯ್ಯ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಸಾರ್ವಜನಿಕರು ಈ ಸೇವೆಯನ್ನು ಸದ್ಬಳಕೆ ಮಾಡಿಕೊಂಡು, ಶುದ್ಧತೆ ಕಾಪಾಡುವಂತೆ ಕೂಡ ಮನವಿ ಮಾಡಲಾಯಿತು.

ಮೇಕೋ ಕನ್ಸಟ್ರಕ್ಷನ್ಸ್ ಸಂಸ್ಥೆಯ ಈ ಸಾಮಾಜಿಕ ಬದ್ಧತೆ ಕಾರ್ಯವು ಇತರ ಸಂಸ್ಥೆಗಳಿಗೆ ಮಾದರಿಯಾಗಿದ್ದು, ಬೇಸಿಗೆಯ ಸಂದರ್ಭದಲ್ಲಿ ಸಾರ್ವಜನಿಕರಿಗೆ ಇದು ಮಹತ್ವದ ನೆರವಿನ ಕೈ ಹಿಡಿದಂತಾಗಿದೆ.

# ಸರ್ಕಾರಿ ಪಿಯು ಕಾಲೇಜಿನಲ್ಲಿ ಗಣತಿದಾರರಿಗೆ ತರಬೇತಿ: ಕಾರ್ಯಕ್ರಮ ಉದ್ಘಾಟಿಸಿದ ಮಾನ್ಯ ಎಡಿಸಿ"




ಧೈರ್ಯದ ದಾರಿ

**ಸಿರವಾರ:** ಮುಂಬರುವ ಜನಗಣತಿ 2027ರ ಹಿನ್ನೆಲೆಯಲ್ಲಿ ತಾಲೂಕಿನ ಎಲ್ಲಾ ಗಣತಿದಾರರು ಹಾಗೂ ಮೇಲ್ವಿಚಾರಕರಿಗಾಗಿ ಆಯೋಜಿಸಲಾಗಿದ್ದ ವಿಶೇಷ ತರಬೇತಿ ಕಾರ್ಯಕ್ರಮಕ್ಕೆ ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಇಂದು ಚಾಲನೆ ನೀಡಲಾಯಿತು.

ರಾಯಚೂರು ಜಿಲ್ಲೆಯ ಮಾನ್ಯ ಅಪರ ಜಿಲ್ಲಾಧಿಕಾರಿಗಳು (A D C) ಕಾರ್ಯಕ್ರಮವನ್ನು ಉದ್ಘಾಟಿಸಿ, ಗಣತಿ ಪ್ರಕ್ರಿಯೆಯ ಮಹತ್ವದ ಕುರಿತು ಮಾತನಾಡಿದರು.

**ನಿಖರ ಮಾಹಿತಿ ಸಂಗ್ರಹ:** ಗಣತಿದಾರರು ಮನೆ-ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಸಾರ್ವಜನಿಕರಿಂದ ನಿಖರವಾದ ಮಾಹಿತಿ ಪಡೆಯಬೇಕು. ದೇಶದ ಅಭಿವೃದ್ಧಿ ಯೋಜನೆಗಳ ರೂಪಿಸುವಲ್ಲಿ ಜನಗಣತಿಯ ದತ್ತಾಂಶಗಳು ಅತ್ಯಂತ ನಿರ್ಣಾಯಕವಾಗಿವೆ ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು.

**ತಾಂತ್ರಿಕ ತರಬೇತಿ:** ಈ ಬಾರಿ ಗಣತಿ ಕಾರ್ಯದಲ್ಲಿ ಡಿಜಿಟಲ್ ಉಪಕರಣಗಳ ಬಳಕೆ ಹೆಚ್ಚಿರುವುದರಿಂದ, ತಾಂತ್ರಿಕವಾಗಿ ಯಾವುದೇ ತಪ್ಪುಗಳಾಗದಂತೆ ಮೇಲ್ವಿಚಾರಕರು ಜಾಗ್ರತೆ ವಹಿಸಬೇಕು ಎಂದು ಸೂಚಿಸಲಾಯಿತು.

**ಭಾಗವಹಿಸುವಿಕೆ:** ಕಾರ್ಯಕ್ರಮದಲ್ಲಿ ಸಿರವಾರ ತಾಲೂಕಿನ ನೂರಾರು ಗಣತಿದಾರರು ಹಾಗೂ ಮೇಲ್ವಿಚಾರಕರು ಭಾಗವಹಿಸಿದ್ದರು. ತರಬೇತಿಯಲ್ಲಿ ಗಣತಿ ನಮೂನೆಗಳನ್ನು ಭರ್ತಿ ಮಾಡುವ ವಿಧಾನ ಮತ್ತು ಸಾರ್ವಜನಿಕರೊಂದಿಗೆ ಸಂವಹನ ನಡೆಸುವ ಕುರಿತು ತಜ್ಞರಿಂದ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ತಹಶೀಲ್ದಾರರಾದ ಅಶೋಕ್ ಪವಾರ್. ಮುಖ್ಯ ಅಧಿಕಾರಿಗಳಾದ ಸುರೇಶ್ ಶೆಟ್ಟಿ , ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದ್ರಿ.ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

**"ಜನಗಣತಿಯು ರಾಷ್ಟ್ರದ ಭವಿಷ್ಯದ ಯೋಜನೆಗಳಿಗೆ ಅಡಿಪಾಯವಾಗಿದೆ. ಪ್ರತಿಯೊಬ್ಬ ಸಿಬ್ಬಂದಿಯೂ ಜವಾಬ್ದಾರಿಯಿಂದ ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು."**
**-ಅಪರ ಜಿಲ್ಲಾಧಿಕಾರಿಗಳು, ರಾಯಚೂರು.**

# ಮೋದಿ ಸಾಲ ಮಾಡಿಲ್ಲವೆ: ಡಿಕೆಶಿ ಪ್ರಶ್ನೆ



**ದಾವಣಗೆರೆ, ಏ.3–** 'ಅಗತ್ಯ ವಸ್ತುಗಳ ಬೆಲೆ ಏರಿಕೆಯ ಮೂಲಕ ಜನರ ಮೇಲೆ ಕೇಂದ್ರ ಸರ್ಕಾರ ಹೇರಿದ ಆರ್ಥಿಕ ಹೊರೆಯನ್ನು ಇಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಸಾಲ ಮಾಡಿದೆ. ಜನಕಲ್ಯಾಣ ಯೋಜನೆಗಳನ್ನು ನೀಡದಿದ್ದರೂ ಪ್ರಧಾನಿ ನರೇಂದ್ರ ಮೋದಿ ಸಾಲ ಮಾಡಿಲ್ಲವೇ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಬೆಲೆ ಏರಿಕೆಯ ಬಿಸಿಯಿಂದ ಪಾರು ಮಾಡಲು ರಾಜ್ಯ ಸರ್ಕಾರ 'ಗ್ಯಾರಂಟಿ' ಯೋಜನೆಗಳ ಮೂಲಕ ಜನರ ಕೈಗೆ ಹಣ ಕೊಡುತ್ತಿದೆ. ಜನರ ಬಗ್ಗೆ ನೈಜ ಕಾಳಜಿ ಹೊಂದಿದ್ದರೆ ಕೇಂದ್ರ ಸರ್ಕಾರ ಕೂಡ ಇಂತಹದೊಂದು ಯೋಜನೆ ರೂಪಿಸಲಿ ಎಂದು ತಿರುಗೇಟು ನೀಡಿದ್ದಾರೆ.

ಸುದ್ದಿಗಾರೊಂದಿಗೆ ಮಾತನಾಡಿದ ಅವರು ಜನರ ಬ್ಯಾಂಕ್ ಖಾತೆಗಳಿಗೆ ತಿಂಗಳಿಗೆ 10,000 ಆರ್ಥಿಕ ನೆರವು ನೀಡಲಿ' ಎಂದು ಆಗ್ರಹಿಸಿದ್ದಾರೆ.

'ಬಿಜೆಪಿ ಖಾಲಿ ಮಾತುಗಳ ಮೂಲಕ ಜನರನ್ನು ಮರಳು ಮಾಡುತ್ತಿದೆ. ಅಕ್ಕಿಗೆ ಅರಿಶಿನ ಬೆರೆಸಿ ಅಯೋಧ್ಯೆಯಿಂದ ತಂದಿರುವಂತೆ ಬಿಂಬಿಸಿಕೊಂಡಿದೆ. ಅಕ್ಕಿ ಹಾಗೂ ಅರಿಶಿನ ಬೆರೆಸಿದ ವಿಡಿಯೊಗಳು ನಮ್ಮ ಬಳಿ ಇನ್ನೂ ಹಾಗೆ ಇವೆ. ಅಕ್ಷತೆಯನ್ನು ಮನೆ–ಮನೆಗೆ ತಲುಪಿಸಿದ ರೀತಿಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳು ಏಕೆ ಪೂರೈಸಬಾರದು ಎಂದು ಕುಟುಕಿದರು

'ನನ್ನೊಬ್ಬನಿಂದ ಅಥವಾ ಸಿದ್ದರಾಮಯ್ಯ ಅವರೊಬ್ಬರಿಂದ ರಾಜ್ಯ ಸರ್ಕಾರ ನಡೆಯುತ್ತಿಲ್ಲ. ಇಬ್ಬರು ಒಟ್ಟಿಗೆ ಶ್ರಮಿಸಿ ಕಾಂಗ್ರೆಸ್ ಅಧಿಕಾರಕ್ಕೆ ತಂದಿದ್ದೇವೆ. ಉಪಚುನಾವಣೆಯಲ್ಲಿ ಕೂಡ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ. ನಮ್ಮೊಂದಿಗೆ ಪಕ್ಷದ ಕಾರ್ಯಕರ್ತರು, ಶಾಸಕರು ಹಾಗೂ ಸಚಿವರೂ ಇದ್ದಾರೆ. ನಾವು ಜಾತಿ, ಧರ್ಮದ ಮೇಲೆ ರಾಜಕಾರಣ ಮಾಡುವುದಿಲ್ಲ. ನೀತಿಯ ಮೇಲೆ ರಾಜಕಾರಣ ಮಾಡುತ್ತೇವೆ' ಎಂದರು

ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಪ್ರಚಾರಕ್ಕೆ ದಾವಣಗೆರೆಯಲ್ಲಿ ವಾಸ್ತವ್ಯ ಹೂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಡರಾತ್ರಿಯವರೆಗೂ ಸರಣಿ ಸಭೆಗಳನ್ನು ನಡೆಸಿದರು. ಕ್ಷೇತ್ರ ವ್ಯಾಪ್ತಿಯ ಮುಸ್ಲಿಂ ಮುಖಂಡರ ಮನೆಗಳಿಗೆ ಭೇಟಿ ನೀಡಿ ಸಮುದಾಯವನ್ನು ವಿಶ್ವಾಸಕ್ಕೆ ಪಡೆಯಲು ಪ್ರಯತ್ನಿಸಿದರು.

'ರಾತ್ರಿ ಬಹಿರಂಗ ಸಭೆ ಮುಗಿದ ಬಳಿಕ ಮಳೆ ಸುರಿದು ಶುಭಸೂಚನೆ ನೀಡಿದೆ. ಪ್ರಚಾರ ಕಾರ್ಯದಲ್ಲಿ ಸಾವಿರಾರು ಕಾರ್ಯಕರ್ತರು ತೊಡಗಿಕೊಂಡಿದ್ದಾರೆ. ಮಧ್ಯರಾತ್ರಿ 12 ಗಂಟೆಯವರೆಗೆ ಹಲವು ಸಭೆಗಳನ್ನು ನಡೆಸಿ ಪರಿಶೀಲನೆ ಮಾಡಿದ್ದೇವೆ' ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು

# ಸೋಲಿನ ಭೀತಿ: ಪ್ರಚಾರಕ್ಕೆ ಯತ್ನಾಳ್ ಕರೆಸಿದ ಬಿಜೆಪಿ



**ಬಾಗಲಕೋಟೆ, ಏ.3–** ಬಾಗಲಕೋಟೆಯಲ್ಲಿ ಬಿಜೆಪಿಗೆ ಸೋಲಿನ ಭಯ ಕಾಣಿಸಿದ್ದಕ್ಕೆ ಬಸನ ಗೌಡ ಯತ್ನಾಳ್ ಅವರನ್ನು ಪ್ರಚಾರಕ್ಕೆ ಕರೆಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಉಮೇಶ್ ಮೇಟಿ ಪರ ಪ್ರಚಾರ ನಡೆಸಲು ಆಗಮಿಸಿದ ಅವರು ಸುದ್ದಿಗಾರೊಂದಿಗೆ ಮಾತನಾಡಿದ ಅವರು ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಬಿಜೆಪಿ ಯಾವಾಗಲೋ ಹೀನಾಯ ಸ್ಥಿತಿಗೆ ತಲುಪಿದ್ದಕ್ಕೆ ಬಸವನ ಗೌಡ ಪಾಟೀಲಗ ಯತ್ನಾಳ್ ಅವರನ್ನು ಕರೆಸಿದ್ದಾರೆ ಎಂದು ದೂರಿದ್ದಾರೆ.

ಇನ್ನು 15 ದಿನ ಅಥವಾ ಒಂದು ತಿಂಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯಮಂತ್ರಿಇ ಆಗಿರುವುದಿಲ್ಲ ಎನ್ನುವ ಕೇಂದ್ರ ಸಚಿವ ವಿ ಸೋಮಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿ, ವಿ ಸೋಮಣ್ಣ ಅವರೇನು ನಮ್ಮ ಹೈಕಮಾಂಡಾ ಹೈಕಮಾಂಡ್ ಏನು ತೀರ್ಮಾನ ತೆಗೆದುಕೊಳ್ಳುತ್ತದೋ ಅದಕ್ಕೆ ನಾನು ಬದ್ಧನಾಗಿರುತ್ತೇನೆ. ವಿ ಸೋಮಣ್ಣ ಕೆಲಸವಿಲ್ಲದ ಮಂತ್ರಿ ಎಂದು ವ್ಯಂಗ್ಯವಾಡಿದರು.

ಆಟೋ ಚಾಲಕರು ಸಚಿವ ಮುನಿಯಪ್ಪ ಅವರ ಮನೆಗೆ ಘೇರಾವ್ ಹಾಕಿದ್ದಕ್ಕೆ ಕೇಂದ್ರ ಸರ್ಕಾರ ಎಲ್‌ಪಿಜಿ ನೀಡಬೇಕು. ಘೇರಾವ್ ಹಾಕುವ ಕೆಲಸ ಇದ್ದರೆ ನರೇಂದ್ರ ಮೋದಿ ಅವರ ಮನೆ ಮುಂದೆ ಮುಂದೆ ಘೇರಾವ್ ಹಾಕಲಿ ಎಂದು ಸಿಟ್ಟು ಹೊರಹಾಕಿದರು.

ದಲಿತರಿಗೆ ಅನ್ಯಾಯ ಮಾಡಿ ಮುಸ್ಲಿಮರಿಗೆ ಮಾತ್ರ ಜಾಸ್ತಿ ಅನುದಾನ ನೀಡಲಾಗಿದೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ, ಮುಸ್ಲಿಮರು ಈ ದೇಶದ ನಾಗರಿಕರಲ್ಲವೆ ಅವರ ಜನಸಂಖ್ಯೆ ಎಷ್ಟಿದೆ ಗೊತ್ತಾ ಶೇಕಡಾ 14ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಅವರಿದ್ದಾರೆ. ಎಲ್ಲರಿಗೂ ಹಣ ಇಟ್ಟಿದ್ದೇವೆ. ಹಾಗೆ ಅವರಿಗೂ ನೀಡಿದ್ದೇವೆ ಎಂದು ಸಮರ್ಥಿಸಿಕೊಂಡರು.

# ಐಎನ್‌ಎಸ್ ಅರಿದಮನ್' ಲೋಕಾರ್ಪಣೆಗೆ ಸಿದ್ಧತೆ




**ವಿಶಾಖಪಟ್ಟಣ. ಏ.3–** ಭಾರತೀಯ ನೌಕಾಪಡೆಯ ಸಾಮರ್ಥ್ಯವನ್ನು ಜಗತ್ತೇ ಬೆರಗುಗಣ್ಣಿನಿಂದ ನೋಡುವಂತೆ ಮಾಡುವ ಮಹತ್ವದ ಬೆಳವಣಿಗೆಯೊಂದರಲ್ಲಿ, ದೇಶದ ಮೂರನೇ ಸ್ವದೇಶಿ ನಿರ್ಮಿತ ಪರಮಾಣು ಚಾಲಿತ ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿ 'ಐಎನ್‌ಎಸ್ ಅರಿದಮನ್' ಶೀಘ್ರದಲ್ಲೇ ನೌಕಾಪಡೆಗೆ ಸೇರ್ಪಡೆಗೊಳ್ಳುವ ಸೂಚನೆ ಸಿಕ್ಕಿದೆ.

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಇಂದು ವಿಶಾಖಪಟ್ಟಣಕ್ಕೆ ಭೇಟಿ ನೀಡಿದ್ದು, ಈ ಸಂದರ್ಭದಲ್ಲಿ ಅದೃಶ್ಯ ಶಕ್ತಿಯಂತಿರುವ 'ಅರಿದಮನ್' ಅನ್ನು ಲೋಕಾರ್ಪಣೆ ಮಾಡುವ ಸಾಧ್ಯತೆಯಿದೆ.

ಈ ಕುರಿತು ಎಕ್ಸ್ (ಟ್ವಿಟರ್) ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, "ಇದು ಕೇವಲ ಒಂದು ಪದವಲ್ಲ, ಇದು ಶಕ್ತಿಯ ಸಂಕೇತ. 'ಅರಿದಮನ್'" ಎಂದು ಬರೆಯುವ ಮೂಲಕ ಕುತೂಹಲ ಕೆರಳಿಸಿದ್ದಾರೆ.

ನೌಕಾಬಲಕ್ಕೆ ಹೊಸ ಆಯಾಮ: ಏನಿದರ ವಿಶೇಷತೆ ಐಎನ್‌ಎಸ್ ಅರಿದಮನ್ ಭಾರತದ ಗುಪ್ತ ಕಾರ್ಯಯೋಜನೆಯಡಿ ನಿರ್ಮಾಣವಾದ ಮೂರನೇ ಪರಮಾಣು ಜಲಾಂತರ್ಗಾಮಿ. ಇದು ಈ ಹಿಂದೆ ಸೇರ್ಪಡೆಯಾದ ಐಎನ್‌ಎಸ್ ಅರಿಹಂತ್ (2016) ಮತ್ತು ಐಎನ್‌ಎಸ್ ಅರಿಘಾಟ್ (2024) ಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗಿದೆ.

ಇದು ಎಂಟು ಲಂಬ ಉಡಾವಣಾ ಟ್ಯೂಬ್‌ಗಳನ್ನು ಹೊಂದಿದ್ದು, ಅರಿಹಂತ್‌ಗಿಂತ ದುಪ್ಪಟ್ಟು ಸಾಮರ್ಥ್ಯ ಹೊಂದಿದೆ. ಇದರಿಂದ 3,500 ಕಿ.ಮೀ ದೂರದ ಗುರಿ ತಲುಪುವ ಎಂಟು ಕೆ–4 ಕ್ಷಿಪಣಿಗಳನ್ನು ಅಥವಾ 750 ಕಿ.ಮೀ ವ್ಯಾಪ್ತಿಯ 24 ಕೆ–15 ಕ್ಷಿಪಣಿಗಳನ್ನು ಉಡಾಯಿಸಬಹುದಾಗಿದೆ.

ಭಾಭಾ ಪರಮಾಣು ಸಂಶೋಧನಾ ಕೇಂದ್ರ ಅಭಿವೃದ್ಧಿಪಡಿಸಿದ ಸುಧಾರಿತ 83 ಮೆಗಾವ್ಯಾಟ್ ಸಾಮರ್ಥ್ಯದ 'ಪ್ರೆಶರೈಸ್ಡ್ ವಾಟರ್ ರಿಯಾಕ್ಟರ್' ಮೂಲಕ ಇದು ಕಾರ್ಯನಿರ್ವಹಿಸಲಿದೆ.

ಅದೃಶ್ಯ ನಡೆ: ಸುಮಾರು 7,000 ಟನ್ ತೂಕವಿರುವ ಈ ನೌಕೆಯು ಸಮುದ್ರದಾಳದಲ್ಲಿ ಅತ್ಯಂತ ನಿಶ್ಯಬ್ದವಾಗಿ ಚಲಿಸುವ ತಂತ್ರಜ್ಞಾನ ಹೊಂದಿದ್ದು, ಶತ್ರು ರಾಷ್ಟ್ರಗಳ ರೇಡಾರ್‌ಗಳಿಗೆ ಸಿಲುಕುವುದು ಕಷ್ಟ.

'ತಾರಗಿರಿ' ಯುದ್ಧನೌಕೆಯೂ ಸಿದ್ಧ
ಇದೇ ವೇಳೆ ರಾಜನಾಥ್ ಸಿಂಗ್ ಅವರು ಸ್ವದೇಶಿ ನಿರ್ಮಿತ ಅತ್ಯಾಧುನಿಕ ಸ್ಟೆಲ್ತ್ ಫ್ರಿಗೇಟ್ 'ಐಎನ್‌ಎಸ್ ತಾರಗಿರಿ' ಅನ್ನು ಸಹ ನೌಕಾಪಡೆಗೆ ಹಸ್ತಾಂತರಿಸಲಿದ್ದಾರೆ.

ಶೇ. 75ಕ್ಕಿಂತ ಹೆಚ್ಚು ಸ್ವದೇಶಿ ಉಪಕರಣಗಳನ್ನು ಬಳಸಿ ಇದನ್ನು ನಿರ್ಮಿಸಲಾಗಿದ್ದು, ಬ್ರಹ್ಮೋಸ್ ಕ್ಷಿಪಣಿಗಳಂತಹ ಮಾರಕ ಶಸ್ತ್ರಾಸ್ತ್ರಗಳನ್ನು ಇದು ಹೊತ್ತೊಯ್ಯಲಿದೆ.

ಶತ್ರುಗಳ ಮೊದಲ ದಾಳಿಯ ನಂತರವೂ ತಿರುಗೇಟು ನೀಡುವ ಭಾರತದ ಪರಮಾಣು ನೀತಿಗೆ ಈ ಜಲಾಂತರ್ಗಾಮಿಗಳು ಬೆನ್ನೆಲುಬಾಗಲಿವೆ. ಸಾಗರದಾಳದಲ್ಲಿ ಅಡಗಿರುವ ಅರಿದಮನ್, ಭಾರತದ ರಕ್ಷಣಾ ಕವಚವಾಗಿ ಕೆಲಸ ಮಾಡಲಿದೆ."

ರಕ್ಷಣಾ ತಜ್ಞರು
ಭಾರತವು ಈಗ ಒಟ್ಟು ನಾಲ್ಕು ಪರಮಾಣು ಜಲಾಂತರ್ಗಾಮಿಗಳನ್ನು ಹೊಂದುವ ಗುರಿ ಹೊಂದಿದ್ದು, ಆ ಮೂಲಕ ಸಮುದ್ರದಲ್ಲಿ ಸದಾ ಒಂದು ಪರಮಾಣು ಸಜ್ಜಿತ ನೌಕೆಯು ಗಸ್ತಿನಲ್ಲಿ ಇರುವಂತೆ ನೋಡಿಕೊಳ್ಳಲಿದೆ. ಇದು ಚೀನಾ ಮತ್ತು ಪಾಕಿಸ್ತಾನದಂತಹ ನೆರೆ ರಾಷ್ಟ್ರಗಳಿಗೆ ಭಾರತ ನೀಡುತ್ತಿರುವ ಪ್ರಬಲ ಸಂದೇಶವಾಗಿದೆ.

# ಮೇ 8ರಂದು ರಾಜ್ಯಮಟ್ಟದ ರೈತ ಜಾಗೃತಿ ಸಮಾವೇಶ: ಪೂರ್ವಭಾವಿ ಸಿದ್ಧತೆ ಸಭೆ



**ವಿಜಯಪುರ, ಏ. 3 :** ಮೇ 8 ರಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಮಟ್ಟದ 4 ನೇ ಬೃಹತ್ ರೈತ ಜನ ಜಾಗೃತಿ ಸಮಾವೇಶವನ್ನು ಆಯೋಜನೆ ಮಾಡಿದ್ದು, ಈ ಕಾರ್ಯಕ್ರಮದಲ್ಲಿ ಸುಕ್ಷೇತ್ರ ಮುಗಳಖೋಡ, ಜಿಡಗಾದ ಪ.ಪೂ ಷಡಕ್ಷರಿ ಶಿವಯೋಗಿ ಡಾ. ಮುರಘರಾಜೇಂದ್ರ ಮಹಾಸ್ವಾಮಿಗಳು ಪಾವನ ಸಾನ್ನಿಧ್ಯವನ್ನು ವಹಿಸಿಕೊಳ್ಳಲಿದ್ದು, ಶಿರಶ್ಯಾಡದ ಅಭಿನವ ಮುರಘೇಂದ್ರ ಶಿವಾಚಾರ್ಯರು ಹಾಗೂ ಬೆಳಗಾವಿಯ ಸುವರ್ಣತಾಯಿ ಹೊಸಮಠ ಸೇರಿದಂತೆ ಇನ್ನಿತರ ಮಠಾಧೀಶರು ಉಪಸ್ಥಿತರಿರುವರು. ರಾಜ್ಯಾಧ್ಯಕ್ಷ ಚುನಪ್ಪಾ ಪೂಜೇರಿ ಅವರ ಅಧ್ಯಕ್ಷತೆಯಲ್ಲಿ, ರಾಜ್ಯಮಟ್ಟದ ರೈತ ಮುಖಂಡರು, ಪ್ರಗತಿಪರ ಸಮಾನ ಮನಸ್ಕರು, ರೈತಪರ ಚಿಂತಕರು, ಅಧಿಕಾರಿಗಳು, ವಿಜ್ಞಾನಿಗಳು, ಹಾಗೂ ನಾಡಿನ ಸಮಸ್ತ ರೈತ ಬಾಂಧವರು ಭಾಗವಹಿಸಲಿದ್ದು ಈ ಕಾರ್ಯಕ್ರಮವನ್ನು ಎಲ್ಲರೂ ಸೇರಿ ಯಶಸ್ವಿ ಮಾಡೋಣ ಎಂದು ರೈತ ಸಂಘದ ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜೀ ಹೇಳಿದರು.

ಈ ನಾಡಿನಲ್ಲಿ ರೈತರಿಗೆ ಎಲ್ಲಾ ಕ್ಷೇತ್ರದಲ್ಲಿ ಎಲ್ಲಾ ಪ್ರಕಾರದ ಅನ್ಯಾಯಗಳಾಗುತ್ತಾ ಬಂದಿವೆ, ಅದನ್ನು ತಡೆಯಬೇಕಾದರೆ ರೈತರೆಲ್ಲರೂ ಜಾತ್ಯಾತೀತವಾಗಿ, ಪಕ್ಷಾತೀತವಾಗಿ, ಧರ್ಮಾತೀತವಾಗಿ ಗುರ್ಲಾಪುರದಲ್ಲಿ ನಡೆದ ಹೋರಾಟದ ಮೂಲಕ ಒಗ್ಗಟ್ಟಿನ ಸಂದೇಶ ಸಾರಿರುವ ರೈತರೆಲ್ಲರೂ ಸಮಯ ಸಂದರ್ಭ ಬಂದಾಗಲೆಲ್ಲ ಒಂದಾಗಬೇಕು. ರೈತರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಈ ಸಮಾವೇಶದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗಮನಕ್ಕೆ ತಂದು ರೈತರ ಶಕ್ತಿ ಎನ್ನೆಂದು ತೋರಿಸಲು ರೈತರೆಲ್ಲರೂ ಒಂದಾಗಿ ಈ ತರಹದ ಸಮಾವೇಶದ ಮೂಲಕ ಒಗ್ಗಟನ್ನು ತೋರಿಸಬೇಕಾಗಿದೆ ಎಂದರು.


ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವತಿಯಿಂದ ಸುಮಾರು 10–15 ಸಾವಿರ ರೈತರೆಲ್ಲರೂ ಸೇರಿಕೊಂಡು 4 ನೇ ಬೃಹತ್ ರೈತ ಜನ ಜಾಗೃತಿ ಸಮಾವೇಶವನ್ನು ನಗರದ ದರಬಾರ ಗ್ರೌಂಡ್ ನಲ್ಲಿ ಆಯೋಜನೆ ಮಾಡಿದ್ದು, ಇಲ್ಲಿ ಹಲವಾರು ಕೃಷಿ ತಜ್ಞರು, ವಿಜ್ಞಾನಿಗಳು, ರೈತ ಮುಖಂಡರು ಕೃಷಿ ಕುರಿತು ಚಿಂತನೆ, ಅಭಿಪ್ರಾಯ ಮಂಡನೆ ಮಾಡುತ್ತಿದ್ದು, ಜೊತೆಗೆ ಕೃಷಿಯಲ್ಲಿ ಹಾಗೂ ವಿವಿಧ ಕ್ಷೇತ್ರದಲ್ಲಿ ವಿನೂತನವಾಗಿ ಸಾಧನೆ ಮಾಡಿದ ಸಾಧಕರಿಗೆ ವಿಶೇಷವಾಗಿ ಸನ್ಮಾನಿಸಲಾಗುವುದು,

ಈ ವೇಳೆ ಜಿಲ್ಲೆಯ 13 ತಾಲೂಕಿನ ಪ್ರತಿಯೊಂದು ಹಳ್ಳಿಯ ರೈತರು, ಯುವಕರು, ಮಹಿಳೆಯರು, ಕಾರ್ಮಿಕರು, ಸೇರಿದಂತೆ ಎಲ್ಲಾ ಪ್ರತಿಪರ ಸಂಘಟನೆಯವರು ಕೂಡಾ ಮುಕ್ತವಾಗಿ ಪಾಲ್ಗೊಳುತ್ತಿದ್ದಾರೆ. ಈ ಕುರಿತು ಪತ್ರಿಕೆ, ದೃಶ್ಯಮಾಧ್ಯಮ, ಸಮೂಹ ಮಾಧ್ಯಮ, ಬ್ಯಾನರ, ಸ್ಟೀಕರ್, ಕರಪತ್ರ ಸೇರಿದಂತೆ ಹಳ್ಳಿಗಳಿಗೆ ವಾಹನಗಳ ಮೂಲಕ ಧ್ವನಿ ವರ್ಧಕ ಹಚ್ಚಿ ಪ್ರಚಾರ ಮಾಡಿ ಜಿಲ್ಲೆಯ ಸಮಸ್ತ ರೈತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳುವಂತೆ ಸಂದೇಶ ಮುಟ್ಟಿಸುವ ಜವಾಬ್ದಾರಿ ಎಲ್ಲರೂ ಮಾಡಬೇಕು ಎಂದರು.

ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಮಾತನಾಡಿ, ಈ ಸಮಾವೇಶದಲ್ಲಿ ಆಲಿಮಟ್ಟಿಯ ಜಲಾಶಯದ ಎತ್ತರ 524.256 ಕ್ಕೆ ಎತ್ತರಿಸಿ ಅದಕ್ಕೆ ಬೇಕಾಗುವ ಹಣವನ್ನು ರಾಜ್ಯ ಅಥವಾ ಕೇಂದ್ರ ಸರಕಾರ ಕೊಟ್ಟು, ಪುರ್ನವಸತಿ ಹಾಗೂ ಪರಿಹಾರವನ್ನು ಬಿಡುಗಡೆ ಮಾಡಲೇಬೇಕು ಎಂದು ಆಗ್ರಹಿಸಲು ಸಂಬಂಧಿಸಿದ ನೆರೆಯ ಬಾಗಲಕೋಟೆ, ಯಾದಗಿರಿ, ಕಲಬುರ್ಗಿ, ರಾಯಚೂರ, ಸೇರಿದಂತೆ ಇತರೆ ಜಿಲ್ಲೆಯ ಪ್ರತಿಯೊಂದು ತಾಲೂಕು, ಹೋಬಳಿ ಹಾಗೂ ಗ್ರಾಮ ಮಟ್ಟದಲ್ಲಿ ರೈತರನ್ನು ಸೇರಿಸಿ ಹೋರಾಟದ ರೂಪರೇಷ ಮಾಡಲು ಲಕ್ಷಾಂತರ ರೈತರೊಂದಿಗೆ ಪಾದಯಾತ್ರೆ ಮಾಡಿ ಸಂಬಂಧಿಸಿದ ಅಧಿಕಾರಿಗಳಿಗೆ, ಜನಪ್ರತಿನಿದಿಗಳಿಗೆ ಮನವಿ ಸಲ್ಲಿಸಲು ಮುಕ್ತವಾಗಿ ಎಲ್ಲರೊಂದಿಗೆ ಮುಕ್ತ ಹಾಗೂ ಗಟ್ಟಿ ಹೋರಾಟ ಪ್ರಾರಂಭ ಮಾಡಲು ಈ ವೇದಿಕೆ ಮೂಲಕ ಚಾಲನೆ ನೀಡಲಾಗುವುದು ಎಂದರು.

ಇದೇ ವೇಳೆ ಮುಖಂಡರಾದ ಶಾಂತಗೌಡ ಪಾಟೀಲ, ಸೋಮು ಬಿರಾದಾರ, ಶ್ರೀಶೈಲ ವಾಲಿಕಾರ, ಸಾತಲಿಂಗಯ್ಯ ಸಾಲಿಮಠ, ಮಹಾಂತಗೌಡ ಬಿರಾದಾರ, ಶಿವಾನಂದ ಹಿರೇಮಠ, ದಯಾನಂದ ಕೋಳಿ, ಮುಕುಬುಲ್ ಕೀಜಿ, ಡಾ. ಕೆಂ.ಎಂ. ಗುಡ್ನಾಳ, ಮಾಳು ಪೂಜಾರಿ, ಅನಮೇಶ ಜಮಖಂಡಿ, ಮುದಕಣ್ಣ ಹೊರ್ತಿ, ಸುಜಾತಾ ಅವಟಿ, ಚೆನ್ನಮ್ಮ ಮೈತ್ರಿ, ರೇಣುಕಾ ಬಿರಾದಾರ, ನಿಲಾಂಬಿಕಾ ಕಟ್ಟಿಮನಿ, ಪ್ರಕಾಶ ತೇಲಿ, ಸಂಗಪ್ಪ ಟಕ್ಕೆ, ಶಂಕರಗೌಡ ಬಿರಾದಾರ, ಸಲೀಂ ಮಾಶ್ಯಾಳ, ಧರೆಪ್ಪ ಅನಂತಪುರ, ರಾಜುಗೌಡ ಬಿರಾದಾರ, ಗುರುನಾಥ ಬಿರಾದಾರ, ಸತೀಶ ದಾಸ್ಯಾಳ, ಗುರುಪಾದ ಹಿಪ್ಪರಗಿ, ಹನಮಂತ ಬ್ಯಾಡಗಿ, ಸೇರಿದಂತೆ 13 ತಾಲೂಕಿನ ರೈತ ಮುಖಂಡರು ಉಪಸ್ಥಿತರಿದ್ದರು.

# ಗ್ಯಾಸ್ ಕೊರತೆ: ಶೆಡ್ ಸೇರಿದ ಲಕ್ಷಾಂತರ ಆಟೋಗಳು



**ಬೆಂಗಳೂರು,ಏ.3–** ಸಿಲಿಕಾನ್ ಸಿಟಿ ಬೆಂಗಳೂರು ಈಗ ಮತ್ತೊಂದು ಸಂಕಷ್ಟವನ್ನು ಎದುರಿಸುತ್ತಿದೆ. ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧ ಭೀತಿ ನೇರವಾಗಿ ನಗರ ಜೀವನದ ಮೇಲೆ ಪರಿಣಾಮ ಬೀರಿದ್ದು, ಅದರ ಹೊಡೆತ ಆಟೋ ಸಂಚಾರಕ್ಕೆ ತಟ್ಟಿದೆ.

ನಗರದಲ್ಲಿ ಸುಮಾರು 2 ಲಕ್ಷ ಆಟೋಗಳು ಓಡಾಡುತ್ತಿದ್ದರೆ, ಗ್ಯಾಸ್ ಕೊರತೆಯಿಂದ ಈಗಾಗಲೇ 1 ಲಕ್ಷಕ್ಕೂ ಹೆಚ್ಚು ಆಟೋಗಳು ಶೆಡ್ ಸೇರಿವೆ. ಐಕಉ ಗ್ಯಾಸ್ ಸಿಗದೇ ಅನೇಕ ಆಟೋಗಳು ರಸ್ತೆಗಿಳಿಯದೆ ಮನೆ ಮುಂದೆ ನಿಂತಿವೆ.

ಗ್ಯಾಸ್ ಕೊರತೆಯಿಂದ ನಗರದ ಹಲವು ಆಟೋ ಗ್ಯಾಸ್ ಬಂಕ್‌ಗಳಲ್ಲಿ ದಿನಗಟ್ಟಲೆ ಸಾಲಿನಲ್ಲಿ ನಿಂತಿರುವ ಚಾಲಕರು? ಆದರೆ ಅನೇಕ ಕಡೆ "ಓಂ ಖಣಂಥಿಙ" ಬೋರ್ಡ್ ಮಾತ್ರ ಕಾಣಿಸುತ್ತಿದೆ.

ಆಟೋ ಸಂಚಾರ ಅರ್ಧಕ್ಕೆ ಕುಸಿತ:
ಗ್ಯಾಸ್ ಸಮಸ್ಯೆಯಿಂದ ನಗರದಲ್ಲಿ ಆಟೋ ಸಂಚಾರ ಶೇಕಡಾ 50 ರಷ್ಟು ಕಡಿಮೆಯಾಗಿದೆ. ಇದರಿಂದ ಸಾರ್ವಜನಿಕರು ಬಿಎಂಟಿಸಿ ಬಸ್‌ಗಳತ್ತ ಮುಖ ಮಾಡಿದ್ದಾರೆ.

ಅಟೋ ಲೋನ್ ಕಟ್ಟಿ ಬಾಳು ಸಾಗಿಸೋದು ಕಷ್ಟ ಮಕ್ಕಳ ಶಾಲಾ ಫೀಸ್ ಕಟ್ಟಲು ಸಂಕಷ್ಟ ದಿನಸಿ ಖರ್ಚಿಗೂ ಹಣ ಇಲ್ಲದ ಪರಿಸ್ಥಿತಿ ಅನೇಕ ಚಾಲಕರು ಆಟೋ ಬಿಟ್ಟು ಬೇರೆ ಕೆಲಸಗಳತ್ತ ಮುಖ ಮಾಡುತ್ತಿದ್ದಾರೆ

ಸರ್ಕಾರದ ವಿರುದ್ಧ ಚಾಲಕರ ಅಸಮಾಧಾನ :

ಈ ಸಮಸ್ಯೆಯ ಬಗ್ಗೆ ಜಿಲ್ಲಾಡಳಿತ ಅಥವಾ ಸರ್ಕಾರದಿಂದ ಸ್ಪಷ್ಟ ಕ್ರಮಗಳಿಲ್ಲವೆಂದು ಚಾಲಕರು ಆರೋಪಿಸುತ್ತಿದ್ದಾರೆ. ದರ ಏರಿಕೆ, ಗ್ಯಾಸ್ ಕೊರತೆ ? ಎರಡೂ ಸೇರಿ ಬದುಕು ಕಷ್ಟವಾಗಿದೆ ಎಂದು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಸಾಮಾನ್ಯ ಜನರಿಗೂ ಆಟೋಗಳ ಕೊರತೆಯಿಂದ ಪ್ರಯಾಣಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ದೈನಂದಿನ ಜೀವನಕ್ಕೂ ತೊಂದರೆ ಉಂಟಾಗಿದೆ.ಸಮಸ್ಯೆ ಹೀಗೆ ಮುಂದುವರಿದರೆ? ಆಟೋ ಚಾಲಕರ ಬದುಕು ಅತಂತ್ರವಾಗುವ ಸಾಧ್ಯತೆ ಇದೆ ಎಂಬ ಆತಂಕ ಹೆಚ್ಚಾಗಿದ್ದು
ಬೆಂಗಳೂರಿನ ಆಟೋ ಚಾಲಕರ ಕಣ್ಣೀರಿನ ಕಥೆ ಈ ಮಟ್ಟಕ್ಕೆ ತಲುಪ್ಪಿದೆ.

# ಕೃಷಿ ಪಂಪಸೆಟ್'ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಆಗ್ರಹಿಸಿ ಮನವಿ



**ಕಾಳಗಿ :ಏ.3:** ಪಟ್ಟಣದ ಕಾಳಗಿ ವಿದ್ಯುತ್ ಉಪ ವಿಭಾಗ ವ್ಯಾಪ್ತಿಯ ರೈತರ ಕೃಷಿ ಪಂಪಸೆಟ್'ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಆಗ್ರಹಿಸಿ ಬುಧವಾರ ಜೆಸ್ಕಾಂ ಎಇಇ ಇಲಿಯಾಸ್ ಅಹ್ಮದ್ ಅವರಿಗೆ ಭಾರತೀಯ ಕಿಸಾನ್ ಸಂಘದ ನೇತೃತ್ವದಲ್ಲಿ ರೈತರು ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ರೈತರು ಮಾತನಾಡಿ, ರೈತರ ಕೃಷಿ ಪಂಪಸೆಟ್ ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡದ್ದರಿಂದ ಬೆಳೆಯಲ್ಲಾ ಒಣಗುತ್ತಿದೆ. ಹಗಲು ಹೊತ್ತಿನಲ್ಲಿ ಕೃಷಿ ಪಂಪಸೆಟ್ ಗಳಿಗೆ 7ಗಂಟೆ ತ್ರೀಫೇಸ್ ವಿದ್ಯುತ್ ನೀಡಬೇಕೆಂಬ ನಿಯಮವಿದ್ದರೂ ಸರಿಯಾಗಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ ಇದರಿಂದ ಕಬ್ಬು ಬೆಳೆ ಒಣಗಿ ಹಾನಿಯುಂಟಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಆದೇಶದಂತೆ ರೈತರ ಪಂಪಸೆಟ್,ಗಳಿಗೆ ಹಗಲು ಹೊತ್ತಿನಲ್ಲಿ ಏಳು ತಾಸು ವಿದ್ಯುತ್ ರಾತ್ರಿ ವೇಳೆ ತೋಟದ ಮನೆಗಳಿಗೆ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆ ಮಾಡಬೇಕು. ಕೃಷಿ ಪಂಪಸೆಟ್ ವಿದ್ಯುತ್ ಹಾಕಿದಾಗ ಎಲ್.ಸಿ ತೆಗೆದುಕೊಂಡ ಸಮಯವನ್ನು ಹೆಚ್ಚುವರಿಯಾಗಿ ವಿದ್ಯುತ್ ಪೂರೈಕೆ ಮಾಡಬೇಕು. ಕಾಳೇಶ್ವರ ದೇವಸ್ಥಾನ ಹಿಂಭಾಗದಲ್ಲಿ ಕ್ಯಾನಲ್ ರಸ್ತೆಯಲ್ಲಿ ಸುಮಾರು 14 ರಿಂದ 15 ವಿದ್ಯುತ್ ಕಂಬಗಳು ಬಾಗಿದ್ದು ಸಂಪೂರ್ಣ ಬಿಳುವ ಹಂತದಲ್ಲಿವೆ ಅವುಗಳನ್ನು ಶೀಘ್ರದಲ್ಲೇ ದುರಸ್ತಿ ಮಾಡಿ ಜೋತು ಬಿದ್ದಿರುವ ವಿದ್ಯುತ್ ತಂತಿ ಸರಿಪಡಿಸಿ ಮುಳ್ಳುಗಂಟಿಗಳು ತೆರವು ಗೊಳಿಸಬೇಕು. ಭರತನೂರ ರಸ್ತೆ ಮಾರ್ಗದಲ್ಲಿ ರಸ್ತೆ ಮೇಲೆ ಯಾವುದೇ ಸುರಕ್ಷತೆ ಇಲ್ಲದೆ ಇರುವ ವಿದ್ಯುತ್ ಟಿಸಿ,ಯನ್ನು ಅಪಾಯ ಸಂಭವಿಸುವ ಮೊದಲೇ ಸ್ಥಳಾಂತರ ಮಾಡಬೇಕು ಎಂದು ಆಗ್ರಹಿಸಿದರು. ಇದಕ್ಕೆ ಸಕಾರಾತ್ಮಕ ಸ್ಪಂದಿಸಿದ ಜೆಸ್ಕಾಂ ಎಇಇ ಇಲಿಯಾಸ್ ಅಹ್ಮದ್ ಮಾತನಾಡಿ, ರೈತರಿಗೆ ವಿದ್ಯುತ್ ಸಮಸ್ಯೆ ಉಂಟಾದರೆ ತಕ್ಷಣವೇ ನನ್ನ ಗಮನಕ್ಕೆ ತನ್ನಿ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡುತ್ತೆನೆ, ಎರಡು ದಿನಗಳಲ್ಲಿ ಬಾಗಿರುವ ವಿದ್ಯುತ್ ಕಂಬಗಳನ್ನು ದುರಸ್ತಿ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಭಾರತೀಯ ಕಿಸಾನ್ ಸಂಘದ ನಗರ ಘಟಕ ಅಧ್ಯಕ್ಷ ಭೀಮರಾಯ ಮಲಘಾಣ, ಪ್ರಧಾನ ಕಾರ್ಯದರ್ಶಿ ಭೀಮರಾಯ ಕುಡ್ಡಳ್ಳಿ, ರೈತರಾದ ಕಾಳಪ್ಪ ರಾಜಾಪೂರ, ನಾಗಣ್ಣ ಕಡಬೂರ, ಗುಡುಸಾಬ್ ಹರಸೂರ, ರಾಜು ಸಲಗೂರ, ಸೂರ್ಯಕಾಂತ ಕಟ್ಟಿಮನಿ, ಬಂಡಪ್ಪ ಬೊಮ್ಮಣ್ಣಿ, ಕೃಷ್ಣ ಸಿಂಗಶೆಟ್ಟಿ, ದೇವೀಂದ್ರ ಪೂಜಾರಿ, ನರಸಿಂಗ್ ಜಾಧವ್, ಕಾಶಿನಾಥ ರಾಜಾಪೂರ, ವಿಶಾಲ ಕಲಶೆಟ್ಟಿ ಸೇರಿದಂತೆ ಅನೇಕ ರೈತರಿದ್ದರು.

# ಎಸ್ಎಸ್ಎಲ್ಸಿ 3ನೇ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ ಸ್ವಾಗತಾರ್ಹ :ಶಬ್ಬೀರ ಸಾತಬಚ್ಚೆ



**ಅಥಣಿ :** ಏ.3:ರಾಜ್ಯದ ಎಸ್ಎಸ್ಎಲ್ಸಿ ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಒತ್ತಡವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಹಿಂದಿ ಮೂರನೇ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿರುವುದು ಅತ್ಯಂತ ಸ್ವಾಗತಾರ್ಹ ಮತ್ತು ವಿದ್ಯಾರ್ಥಿ ಸ್ನೇಹಿ ಕ್ರಮವಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಅಥಣಿ ತಾಲೂಕು ಅಧ್ಯಕ್ಷ ಶಬ್ಬೀರ ಸಾತಬಚ್ಚೆ ಸಂತಸ ವ್ಯಕ್ತಪಡಿಸಿದ್ದಾರೆ.
ಈ ಬಗ್ಗೆ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಮೂರನೇ ಭಾಷೆ ಹಿಂದಿ ಪರೀಕ್ಷೆಯ ದೃಷ್ಟಿಯಿಂದ ಕೆಲವೊಮ್ಮೆ ಸವಾಲಾಗಿ ಪರಿಣಮಿಸುತ್ತಿತ್ತು. ಈಗ ಸರ್ಕಾರ ಈ ವಿಷಯಕ್ಕೆ ಅಂಕಗಳ ಬದಲಾಗಿ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತರುತ್ತಿರುವುದು ವಿದ್ಯಾರ್ಥಿಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲಿದೆ. ಇದರಿಂದ ವಿದ್ಯಾರ್ಥಿಗಳು ಇತರ ಪ್ರಮುಖ ಪಠ್ಯದ ವಿಷಯಗಳತ್ತ ಹೆಚ್ಚಿನ ಗಮನ ಹರಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.
ಶಿಕ್ಷಣ ಕ್ಷೇತ್ರದಲ್ಲಿ ಇಂತಹ ಸುಧಾರಣೆಗಳು ಅತ್ಯಗತ್ಯ. ಕೇವಲ ಅಂಕಗಳ ಬೆನ್ನತ್ತದೆ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪೂರಕವಾದ ವಾತಾವರಣ ನಿರ್ಮಿಸಲು ಸರ್ಕಾರದ ಈ ಕ್ರಮ ಸಹಕಾರಿಯಾಗಿದೆ. ಸರ್ಕಾರದ ಈ ನಿರ್ಧಾರವು ಲಕ್ಷಾಂತರ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಯ್ದಿದೆ," ಎಂದು ಶಬ್ಬೀರ ಸಾತಬಚ್ಚೆ ಸರ್ಕಾರದ ಕ್ರಮವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

# ಮೆಕ್ಯಾನಿಕರು ತರಬೇತಿ ಪಡೆದರೆ ಮುಂದಿನ ದಿನಗಳಲ್ಲಿ ಅವಕಾಶ ಸಿಗುತ್ತವೆ ; ಕಮಲಾಕರ್ ಧನ್ನಿ




ಕಲಬುರಗಿ ; ಏ.3:ದ್ವಿಚಕ್ರ ವಾಹನ ಮೆಕ್ಯಾನಿಕರು ಅನುಭವದಿಂದ ಕೆಲಸ ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ತರಬೇತಿ ಪಡೆದುಕೊಂಡರೆ ಹೆಚ್ಚಿನ ಅವಕಾಶ ಸಿಗಲು ಸಾದ್ಯ ಎಂದು ಕೆಟಿಡಬ್ಲೂಓಟಿಎ ಜಿಲ್ಲಾಧ್ಯಕ್ಷ ಕಮಲಾಕರ್ ಧನ್ನಿ ಹೇಳಿದರು.
ನಗರದ ಅಪ್ಪನ ಕೆರೆಯ ಹತ್ತಿರವಿರುವ ಕಹಿ ರುಚಿ ಹೊಟೇಲ್ ನಲ್ಲಿ ನಡೆದ ಬಿಎಸ್6 ತರಬೇತಿ ಎಬಿ ಎಸ ಹಾಗೂ ನಾನ್ ಎಬಿಎಸ್ ಕಾರ್ಯಕ್ರಮದಲ್ಲಿ ಅದ್ಯಕ್ಷ ವಹಿಸಿ ಮಾತನಾಡಿದ ಅವರು, ಪ್ರಸ್ತುತ ದ್ವಿಚಕ್ರ ವಾಹನಗಳು ಡಿಸ್ಕ್ ಬ್ರೇಕ್ ಹಿಡಿದರೆ ಸ್ಕಿಡ್ ಆಗುವ ಸಾಧ್ಯತೆ ಇತ್ತು. ಎಬಿಎಸ್ ಬರುವುದರಿಂದ ಸೆನ್ಸಾರ್ ಇತುವುದಕ್ಕೆ ವಾಹನ ಸವಾರರು ಎಷ್ಟೇ ವೇಗವಾಗಿ ವಾಹನ ಓಡಿಸಿದರು ಕಂಟ್ರೋಲ್ ಮಾಡಲು ಸಾದ್ಯವಿದೆ ಎಂದು ಕಮಲಾಕರ್ ಮಾಹಿತಿ ನೀಡಿದರು.ದೇವಾನಂದ ಅಟೋಮೋಬೈಲ್ಸ್ ಎಲ್ ಎಲ್ ಪಿ ಗ್ರೂಪ್ ಮಾಲೀಕರಾದ ವಿಠ್ಠಲ್ ಎಸ್. ಸುತ್ರಾವೆ, ಸುಭಾಷ್ ವಿ.ಸುತ್ರಾವೆ, ವಿಶ್ವನಾಥ ಪಾಟೀಲ, ಪ್ರಶಾಂತ ಕುಲಕರ್ಣಿ ಎಬಿಎಸ್ ಬಗ್ಗೆ ಸಂಪೂರ್ಣ ಮಾಹಿತಿ ಹಂಚಿಕೊಂಡರು.

# ಅದ್ದೂರಿ ಸಾಮ್ರಾಟ ಅಶೋಕ ಜಯಂತಿ; 'ಯುದ್ಧ ಬೇಡ, ಬುದ್ಧ ಬೇಕು' ಘೋಷಣೆ



**ಜೇವರ್ಗಿ:ಏ.3:** 'ಜಗತ್ತಿಗೆ ಇಂದು ಕ್ಷಮಯಾ ಧರಿತ್ರಿ ಬುದ್ಧನ ಶಾಂತಿ ಸಂದೇಶದ ತುರ್ತು ಅಗತ್ಯವಿದೆ' ಎಂಬ ಆಶಯದೊಂದಿಗೆ ಪಟ್ಟಣದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಭವನದಲ್ಲಿ ಗುರುವಾರ ಹುಣ್ಣಿಮೆ ಹಾಗೂ ಸಾಮ್ರಾಟ ಅಶೋಕನ ಜಯಂತಿಯನ್ನು ಅತ್ಯಂತ ವೈಭವದಿಂದ ಆಚರಿಸಲಾಯಿತು.
ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪೂಜ್ಯ ವರಜೋತಿ ಬಂತೇಜಿ ಅವರು ವಹಿಸಿ ಆಶೀರ್ವಚನ ನೀಡಿದರು. ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಕಲಬುರ್ಗಿಯ ಖ್ಯಾತ ದಲಿತ ಚಿಂತಕ ಶ್ರೀ ಹನುಮಂತ ಬೋಧನ್ ಕರ್ ಅವರು ಮಾತನಾಡಿ, "ಬುದ್ಧನ ತತ್ವಗಳು ಕೇವಲ ಒಂದು ಧರ್ಮಕ್ಕೆ ಸೀಮಿತವಲ್ಲ, ಅವು ವಿಶ್ವದ ಮಾನವಕುಲಕ್ಕೆ ದಾರಿದೀಪವಾಗಿವೆ. ವೈಜ್ಞಾನಿಕ ಮನೋಭಾವ ಹಾಗೂ ಮಾನವೀಯ ಮೌಲ್ಯಗಳೇ ಬೌದ್ಧ ಧಮ್ಮದ ಅಡಿಪಾಯ," ಎಂದು ಪ್ರತಿಪಾದಿಸಿದರು.
ಶಾಂತಿಯ ಪಥವೇ ಶ್ರೇಷ್ಠ:
ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಶ್ರೀ ಶಾಂತಪ್ಪ ಕೂಡ್ಲಿಗಿ ಅವರು ಮಾತನಾಡಿ, "ಕಳಿಂಗ ಯುದ್ಧದ ನಂತರ ರಕ್ತಪಾತದಿಂದ ಮನನೊಂದ ಸಾಮ್ರಾಟ ಅಶೋಕನು ಶಸ್ತ್ರತ್ಯಾಗ ಮಾಡಿ ಬುದ್ಧನ ಶರಣು ಹೋದನು. ಅಂದಿನಿಂದ ಇಂದಿನವರೆಗೆ ವಿಶ್ವಕ್ಕೆ ಬೇಕಿರುವುದು ಯುದ್ಧವಲ್ಲ, ಬದಲಾಗಿ ಶಾಂತಿ ಮತ್ತು ನೆಮ್ಮದಿ ನೀಡುವ ಬುದ್ಧನ ಮಾರ್ಗ. ಸಾಮ್ರಾಟ ಅಶೋಕನ ಧಮ್ಮ ವಿಜಯದ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ," ಎಂದರು.
ಗಣ್ಯರ ಉಪಸ್ಥಿತಿ ಮತ್ತು ದಾಸೋಹ:
ಈ ಸಂದರ್ಭದಲ್ಲಿ ಭಾರತೀಯ ಬೌದ್ಧ ಮಹಾಸಭಾದ ತಾಲ್ಲೂಕು ಅಧ್ಯಕ್ಷರಾದ ಮಲ್ಲಣ್ಣ ಕೊಡಚಿ ಸೇರಿದಂತೆ ಪ್ರಮುಖರಾದ ಪುಂಡಲಿಕ ಗಾಯಕ್ವಾಡ, ಭೀಮರಾಯ ನಗನೂರು, ಶ್ರೀಮಂತ ಧನಕರ್, ರಾಯಪ್ಪ ಬಾರಿಗಡ, ಭೀಮಶಂಕರ್ ಹರನಾಳ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.
ಕಾರ್ಯಕ್ರಮಕ್ಕೆ ಆಗಮಿಸಿದ್ದ ನೂರಾರು ಬೌದ್ಧ ಉಪಾಸಕ-ಉಪಾಸಕಿಯರಿಗೆ ಹಾಗೂ ಅಭಿಮಾನಿಗಳಿಗೆ ಶ್ರೀ ರಾಜಶೇಖರ್ ಎಸ್. ಶಿಲ್ಪಿ (ನೋಟರಿ, ಭಾರತ ಸರ್ಕಾರ ಹಾಗೂ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ) ಅವರು ಅನ್ನಪ್ರಸಾದ ಸೇವೆಯನ್ನು ಅತ್ಯಂತ ಶಿಸ್ತುಬದ್ಧವಾಗಿ ವ್ಯವಸ್ಥೆಗೊಳಿಸಿದ್ದರು.
ಸಂಗಣ್ಣ ಗುಡೂರ್, ನಿಂಗಪ್ಪ ಗುಲ್ಯಾಳ, ವಿಶ್ವರಾಧ್ಯ ಗಣವಾರ ಸೇರಿದಂತೆ ಜೇವರ್ಗಿ ತಾಲ್ಲೂಕಿನ ಪ್ರಮುಖ ದಲಿತ ಹಾಗೂ ಬೌದ್ಧ ಮುಖಂಡರು ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷಿಯಾದರು. ಈ ಸಮಾರಂಭವು ಪಟ್ಟಣದಲ್ಲಿ ಸಾಮರಸ್ಯ ಮತ್ತು ವೈಚಾರಿಕ ಜಾಗೃತಿಗೆ ನಾಂದಿ ಹಾಡಿತು.

# ಝುಳಕಿ(ಬಿ) ಗ್ರಾಮದಲ್ಲಿ ಜಾತ್ರಾ ಮಹೋತ್ಸವ



**ಕಲಬುರಗಿ:ಏ.3:**ರೈತನಿಲ್ಲದೆ ದೇಶವೇ ಇಲ್ಲ,ನೀವು ಬೆಳೆಯುವ ಒಂದು ಕಾಳು ಅನ್ನ ನಮ್ಮ ಜೀವನಾಡಿ ಎಂದು ಜನಪದ ತಜ್ಞ ಡಾ. ಸಿದ್ದಪ್ಪ ಬಿದರಿ ಹೇಳಿದರು. ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಝುಳಕಿ (ಬಿ)ಗ್ರಾಮದ ಶ್ರೀ ಭೋಗೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಸಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ರೈತರ ಕಷ್ಟಗಳು ನನಗೆ ಗೊತ್ತಿದೆ ಮಳೆ ಕೊರತೆ, ಬೆಲೆ ಸಮಸ್ಯೆ, ಸಾಲದ ಒತ್ತಡ. ಇದಕ್ಕೆ ಪರಿಹಾರ ಒಂದೇ ನಾವು ಒಗ್ಗಟ್ಟಾಗಿ ನಿಂತರೆ ಮಾತ್ರ. ಸಹಕಾರ ಸಂಘಗಳು, ಹೊಸ ತಂತ್ರಜ್ಞಾನ, ಮತ್ತು ಸಮೂಹ ಶಕ್ತಿ ನಮ್ಮನ್ನು ಉಳಿಸುತ್ತದೆ.
ಯುವಕರೇ ರಾಷ್ಟ್ರದ ಶಕ್ತಿ,ನಿಮ್ಮ ಕೈಯಲ್ಲಿ ನಮ್ಮ ಭವಿಷ್ಯ ಇದೆ. ನೀವು ಓದಬೇಕು, ಬೆಳೆಯಬೇಕು ಆದರೆ ಹಡೆದ ತಾಯಿ-ತಂದೆ ಹಾಗೂ ಊರನ್ನು ಮರೆತರೆ ದೊಡ್ಡ ನಷ್ಟ. ನಗರಕ್ಕೆ ಹೋಗಿ ಕೆಲಸ ಮಾಡಬಹುದು, ಆದರೆ ನಿಮ್ಮ ಗ್ರಾಮಕ್ಕೆ ಏನು ಕೊಟ್ಟಿದ್ದೀರಿ ಎಂಬುದನ್ನು ಯೋಚಿಸಿ. ಕೃಷಿಯಲ್ಲಿ ಹೊಸ ಪ್ರಯೋಗಗಳು ಮಾಡಿ, ಸ್ವಂತ ಉದ್ಯೋಗಗಳನ್ನು ಪ್ರಾರಂಭಿಸಿ, ನಿಮ್ಮ ಊರನ್ನು ಮಾದರಿ ಗ್ರಾಮವನ್ನಾಗಿ ಮಾಡಿ.ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ ಎಂದು ಹೇಳಿದರು. ಹಾಸ್ಯ ಕಲಾವಿದ ಗುಂಡಣ್ಣ ಡಿಗ್ಗಿ ಮಾತನಾಡುತ್ತ ಈ ಜಾತ್ರೆ ಕೇವಲ ಹಬ್ಬ ಅಲ್ಲ ಇದು ನಮ್ಮ ಐಕ್ಯತೆ, ಭಕ್ತಿ, ಹಾಗೂ ನಮ್ಮ ಜೀವನ ಶೈಲಿ. ನಾವು ಈ ಪರಂಪರೆಯನ್ನು ಕಾಪಾಡಬೇಕು,ಜೊತೆಗೆ ಹೊಸ ಆಲೋಚನೆಗಳನ್ನು ಸ್ವೀಕರಿಸಿ ಮುಂದುವರೆಯಬೇಕು.ಗ್ರಾಮೀಣ ಭಾಗದ ಜಾತ್ರೆ, ಉತ್ಸವಗಳು ಸರ್ವರ ಮನಸ್ಸನ್ನು ಒಂದು ಗುಡಿಸಿ ಸಮೃದ್ಧ ಸಮಾಜ ಕಟ್ಟುತ್ತದೆ ಎಂದು ಹೇಳುತ್ತಾ ಹಲವಾರು ಹಾಸ್ಯ ಚಟಾಕಿಗಳನ್ನು ಹೇಳಿ ನೆರೆದವರನ್ನು ರಂಜಿಸಿದರು. ಮುಖ್ಯ ಅಥಿತಿಯಾಗಿ ಜನಪರ ಹೋರಾಟಗಾರ, ನ್ಯಾಯವಾದಿ ಹಣಮಂತರಾಯ ಅಟ್ಟೂರ ಆಗಮಿಸಿದರು.ಜಾತ್ರಾ ಕಮಿಟಿಯ ಸರ್ವ ಸದಸ್ಯರು ಹಾಗೂ ಗ್ರಾಮದ ಹಿರಿಯರು, ಮಹಿಳೆಯರು, ಯುವಕರು ಸೇರಿದಂತೆ, ಸುತ್ತಮುತ್ತಲಿನ ಗ್ರಾಮದ ಅನೇಕ ಜನ ಭಾಗವಹಿಸಿದರು.
ಶುಕ್ರವಾರ ಸಾಯಂಕಾಲ ಶ್ರೀ ಭೋಗೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಭವ್ಯ ರಥೋತ್ಸವ ನಂತರ ವಿವಿಧ ಕಲಾವಿದರಿಂದ ಹಾಸ್ಯ ರಸಮಂಜರಿ ಕಾರ್ಯಕ್ರಮ ಜರುಗಲಿದೆ ಎಂದು ಸರ್ವರೂ ಭಾಗವಹಿಸಿ ಯಶಸ್ವಿ ಗೊಳಿಸಬೇಕೆಂದು ಕಮಿಟಿಯ ಮುಖಂಡರು ವಿನಂತಿಸಿಕೊಂಡರು.

# ಕರ್ಮಗಳನ್ನು ಯಾವಾಗಲೂ ಯೋಚಿಸಿ ಮಾಡಿ ; ಬಡದಾಳ ಶ್ರೀಗಳು

**ಅಫಜಲಪುರ:ಏ.3:** ನಮ್ಮ ಜೀವನದಲ್ಲಿ ಎದುರಾಗುವ ಕಷ್ಟ ಸುಖಗಳಿಗೆ ನಾವು ಮಾಡುವ ಕರ್ಮಗಳೇ ಕಾರಣವಾಗುತ್ತವೆ ಹೀಗಾಗಿ ಕರ್ಮಗಳನ್ನು ಯಾವಾಗಲೂ ಯೋಚಿಸಿ ಮಾಡಿ ಎಂದು ಬಡದಾಳ ತೇರಿನ ಮಠದ ಡಾ. ಅಭಿನವ ಚನ್ನಮಲ್ಲ ಶಿವಯೋಗಿ ಶಿವಾಚಾರ್ಯರು ಹೇಳಿದರು.ಅವರು ತಾಲೂಕಿನ ಗೌಡಗಾಂವ ಗ್ರಾಮದ ಶರಣಬಸವೇಶ್ವರ ಹಾಗೂ ಮಲ್ಲಿಕಾರ್ಜುನ ದೇವರ 12ನೇ ವರ್ಷದ ಜಾತ್ರಾ ಮಹೋತ್ಸವದ ಧರ್ಮಸಭೆಯಲ್ಲಿ ಸಾನಿಧ್ಯ ವಹಿಸಿ ಮಾತನಾಡುತ್ತಾ ಗೌಡಗಾಂವ ಗ್ರಾಮ ಗಾತ್ರದಲ್ಲಿ ಚಿಕ್ಕದಾಗಿದ್ದರು ಈ ಊರಿನ ಭಕ್ತರ ಭಕ್ತಿ ಬಹಳ ದೊಡ್ಡದಾಗಿದೆ. ಕಳೆದ 12 ವರ್ಷಗಳಿಂದ ಊರಲ್ಲಿ ಬಹಳ ಅರ್ಥಪೂರ್ಣವಾಗಿ ಜಾತ್ರೆ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿದ್ದೀರಿ. ನಿಮ್ಮ ಭಕ್ತಿಗೆ ಗುರು ಮೆಚ್ಚಿದ್ದು ಈ ಭಕ್ತಿಯ ಜಾತ್ರೆಯ ಮೆರಗು ಇನ್ನಷ್ಟು ಹೆಚ್ಚುವಂತಾಗಲಿ ಎಂದು ಶುಭ ಹಾರೈಸಿದರು.ಇನ್ನೂ ಊರಿನ ಯುವಕರು ದುಶ್ಚಟಗಳಿಗೆ ದಾಸರಾಗಿ ಬದುಕು ಹಾಳು ಮಾಡಿಕೊಳ್ಳಬೇಡಿ, ನಿಮ್ಮ ಕುಟುಂಬಗಳನ್ನು ಸುರಕ್ಷಿತವಾಗಿಟ್ಟುಕೊಳ್ಳಿ, ದುಶ್ಚಟಗಳನ್ನು ಬಿಟ್ಟು ಉಜ್ವಲ ಭವಿಷ್ಯ ರೂಪಿಸಿಕೊಳ್ಳಿ ಎಂದು ಕರೆ ನೀಡಿದರು. ಧರ್ಮಸಭೆಗೂ ಮುನ್ನ ಊರಿನ ಪ್ರಮುಖ ಬೀದಿಗಳಲ್ಲಿ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ ಜರುಗಿತು. ಅಡ್ಡಪಲ್ಲಕ್ಕಿ ಸಾಗುವ ದಾರಿಯುದ್ದಕ್ಕೂ ಭಕ್ತರು ಹೂವಿನ ದಾರಿ ನಿರ್ಮಿಸಿದ್ದರು,



ಅಲ್ಲದೆ ಕುಂಭ ಕಳಶ, ವಾದ್ಯಮೇಳಗಳು ಅಡ್ಡಪಲ್ಲಕ್ಕಿಯ ಮೆರುಗನ್ನು ಹೆಚ್ಚಿಸಿದ್ದವು.
ಈ ಸಂದರ್ಭದಲ್ಲಿ ವೇ. ಶಿವರುದ್ರಯ್ಯ ಸ್ವಾಮಿ ಗವಾಯಿ, ಮಲ್ಕಯ್ಯ ಸ್ವಾಮಿ ಮಠಪತಿ, ಪ್ರಭುಲಿಂಗ ಬಿರಾದಾರ, ಸಾತಲಿಂಗಪ್ಪ ಪಾಟೀಲ್, ಶರಣು ಮೂಲಗೆ, ಮಹಾಂತಪ್ಪ ಪಾಟೀಲ್, ಸಿದ್ದರಾಮ ಪಾಟೀಲ್, ಶ್ರೀಶೈಲ್ ಸಾಲಿಮಠ, ಸಿದ್ದರಾಮಯ್ಯ ಮಠಪತಿ, ಅರಣವೀರಯ್ಯ ಕಲ್ಬುರ್ಗಿಮಠ, ಗುಂಡು ಪಾಟೀಲ್, ಈರಣ್ಣಗೌಡ ಪಾಟೀಲ್, ಲಕ್ಷ್ಮೀಕಾಂತ ಬಿರಾದಾರ, ಜಗದೀಶ ಮೂಲಗೆ ಸೇರಿದಂತೆ ಗ್ರಾಮಸ್ಥರು ಇದ್ದರು.

# ಕಾನೂನು ಚೌಕಟ್ಟಿನಡಿ ಮೇಯರ್–ಉಪ ಮೆಯರ್ ಚುನಾವಣೆ ನಡೆಸಿ: ಕೆಂಪೆನೋರ್




**ಬೀದರ್:ಏ.3:** ಕಾನೂನು ಚೌಕಟ್ಟಿನಡಿ ಮೇಯರ್ ಹಾಗೂ ಉಪ ಮೆಯರ್ ಚುನಾವಣೆ ನಡೆಸಿ ಇಲ್ಲವಾದರೆ ನ್ಯಾಯಾಲಯದ ಮೊರೆ ಹೋಗುತ್ತೇವೆಂದು ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆ ಸಂಸ್ಥಾಪಕ ಅಧ್ಯಕ್ಷರಾದ ಸ್ವಾಮಿದಾಸ ಕೆಂಪೆನೋರ್ ಎಚ್ಚರಿಸಿದ್ದಾರೆ.

ಬುಧವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಟಿ ಉದ್ದೇಸಿಸಿ ಮಾತನಾಡಿರುವ ಅವರು, ಮೇಯರ್ ಹಾಗೂ ಉಪ ಮೆಯರ್ ಇವರನ್ನು ಆಯ್ಕೆ ಮಾಡಲು ಕಾಪೆರ್ರೊರೆಟಗಳೆ ಬೇಕು ಹೊರತು ನಗರ ಸಭೆ ಸದಸ್ಯರಲ್ಲ. ಈಗಿರುವವರು ನಗರ ಸಭೆ ಸದಸ್ಯರು. ಇವರು ಮೆಯರ್ ಹಾಗೂ ಉಪ ಮೆಯರನ್ನು ಆಯ್ಕೆ ಮಾಡಲು ಸಾಧ್ಯವಿಲ್ಲ. ಇದು ಸ್ಥಳಿಯ ಸಂಸ್ಥೆಗಳ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ವಿಚಾರವಾಗಿ ಇಲ್ಲಿಯ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ, ಪೌರಾಡಳಿತ ಸಚಿವ ರಹಿಮ್ ಖಾನ್, ನಗರಾಭಿವೃದ್ಧಿ ಸಚಿವ ಭೇರತಿ ಸುರೇಶ ಈ ಬಗ್ಗೆ ಸಾರ್ವಜನಿಕರಿಗೆ ಸ್ಪಷ್ಟಿಕರಣ ಕೊಡಬೇಕು ಎಂದು ಆಗ್ರಹಿಸಿದರು.

ಈಲ್ಲಾ ಪಂಚಾಯತ, ತಾಲೂಕು ಪಂಚಾಯತ ಚುನಾವಣೆಗಳು ನಡೆದು ಎಳೆಂಟು ವರ್ಷಗಳೆ ಕಳೆದು ಹೋಗಿವೆ. ಇತ್ತಿಚೀಗೆ ಗ್ರಾಮ ಪಂಚಾಯತ ಅಧ್ಯಕ್ಷ–ಉಪಾಧ್ಯಕ್ಷರು ಹಾಗೂ ಸದಸ್ಯರ ಅಧಿಕಾರ ಅವಧಿ ಮುಗಿದು, ಅಲ್ಲಿ ನೋಡಲ್ ಅಧಿಕಾರಿಗಳು, ಅಡಳಿತಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುವಾಗ ಬೀದರ್ ಮಹಾನಗರ ಪಾಲಿಕೆಗೆ ಈ ರೀತಿ ಅನಧಿಕೃಯ ಮಾನದಂಡವೇಕೆ? ಎಂದು ಪ್ರಶ್ನೆ ಮಾಡಿದರು.


ಬೀದರ್ ನಗರ ಸಭೆ ಮಹಾನಗರ ಪಾಲಿಕೆಯಾಗಿರುವುದು ಸಂತೋಷ. ಆದರೆ ನಿಯಮ ಗಾಳಿಗೆ ತೂರಿ ಈ ತಿಂಗಳು 10ರಂದು ಮೆಯರ್, ಉಪ ಮೆಯರ್ ಚುನಾವಣೆ ನಡೆಸಲು ಮುಂದಾಗಿರುವುದು. ಮುರ್ಖತನದ ಪರಮಾವಧಿ. ಈ ವಿಚಾರ ಕೈ ಬಿಟ್ಟು ಉಳಿದ ಅವಧಿಗಾಗಿ ನಗರ ಸಭೆಯ ಅಧ್ಯಕ್ಷ, ಉಪಾಧ್ಯಕ್ಷರನ್ನೇ ಆಯ್ಕೆ ಮಾಡಿ ಸಮಾಜಕ್ಕೆ ಒಳ್ಳೆಯ ಸಂದೇಶ ರವಾನಿಸುವಂತಾಗಲಿ ಎಂದು ಕೆಂಪೆನೋರ್ ಅಭಿಪ್ರಾಯ ಪಟ್ಟಿರುವರು.

ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆಯ ಜಿಲ್ಲಾಧ್ಯಕ್ಷ ಡಾ.ಜೇಮ್ಸ್, ಪದಾಧಿಕಾರಿಗಳಾದ ಸೂರಜ್ ನೆಲವಾಳಕರ್, ವಿಲ್ಸನ್ ಕುಡ್ತೆನೂರ್, ಅಂಬಣ್ಣ ಬೇಲೂರ್, ವೆಂಕಟರಾವ ಪಾಟೀಲ, ಘಾಳೆಪ್ಪ ಹಂತಿ, ಸುನೀಲ ವಾಟರಕರ್ ಹಾಗೂ ಇತರರು ಪತ್ರಿಕಾಗೋಷ್ಟಿಯಲ್ಲಿದ್ದರು.

# ನೀರಿನಲ್ಲಿ ಮುಳುಗಿ ವಿದ್ಯಾರ್ಥಿ ಸಾವು

**ಜೇವರ್ಗಿ:ಏ.3:** ಈಜಲು ತೆರಳಿದ್ದ ವಿದ್ಯಾರ್ಥಿ ನೀರಿನಲ್ಲಿ ಮುಳುಗಿ ಸಾವನಪ್ಪಿದ ಘಟನೆ ತಾಲ್ಲೂಕಿನ ಹಂದನೂರ ಗ್ರಾಮದಲ್ಲಿ ಗುರುವಾರ ಸಂಭವಿಸಿದೆ.

ಘಟನಾ ಸ್ಥಳಕ್ಕೆ ಪಿಎಸ್ಐ ಗಜಾನನ ಬಿರಾದಾರ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಜೇವರ್ಗಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.




ಲಾಲಸಾಬ ಸರ್ದಾರ 20 ಹು ಮು ಖ ಪಟೇಲ್ (19) ಎಂದು ಲಾಲಸಾಬ್ ಪ್ರತಿಭೆಯಾಗಿದ್ದ ಲಾಲಸಾಬ್ ಗುರುತಿಸಲಾಗಿದೆ. ಜೇವರ್ಗಿ ಪಟ್ಟಣದ ಉತ್ತಮ ನೃತ್ಯಗಾರನಾಗಿದ್ದ. ಒಳ್ಳೆಯ ಕದಂಬ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಅಭ್ಯಾಸ ಮಾಡುತ್ತಿದ್ದ ಲಾಲಸಾಬ್ ಗುರುವಾರ ಮಧ್ಯಾಹ್ನ ಗೆಳೆಯರೊಂದಿಗೆ ಗ್ರಾಮದ ಹತ್ತಿರದ ಭೀಮಾನದಿಯಲ್ಲಿ ಈಜಲು ತೆರಳಿದ್ದ. ನೀರಿನ ಸೆಳೆತಕ್ಕೆ ಸಿಲುಕಿ ಲಾಲಸಾಬ್ ।ಮೃತಪಟ್ಟಿದ್ದಾನೆ ಎಂದು ಪೊಲೀಸರು ಇನ್‌ಸ್ಟಾಗ್ರಾಂನಲ್ಲಿ ರೀಲ್ಸ್ ಮಾಡುವ ಮೂಲಕ 37 ಸಾವಿರಕ್ಕೂ ಅಧಿಕ ಫಾಲೋವರ್ಸ್ ಹೊಂದಿದ್ದರು. ಈಚೆಗೆ ಖಾಸಗಿ ವಾಹಿನಿಯ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಕಾರ್ಯಕ್ರಮದಲ್ಲಿಯೂ ತೀರ್ಪುಗಾರರ ಪ್ರಶಂಸೆಗೆ ಪಾತ್ರನಾಗಿದ್ದರು.

# ಆಹಾರ ಇಲಾಖೆ ಅಧಿಕಾರಿಗಳಿಂದ ಗೃಹ ಬಳಕೆಯ 9 ಸಿಲಿಂಡರ್‌ಗಳು ಜಪ್ತಿ



**ಸೈದಾಪುರ:ಏ.3:** ಹೋಟೆಲ್, ರೆಸ್ಟೋರೆಂಟ್ ಸೇರಿದಂತೆ ವಾಣಿಜ್ಯ ಸ್ಥಳಗಳಲ್ಲಿ ಗೃಹ ಬಳಕೆ ಎಲ್‌ಪಿಜಿ ಸಿಲೆಂಡರ್ ಬಳಸುವುದು ಕಾನೂನು ಬಾಹಿರ ಮತ್ತು ಅತ್ಯಂತ ಅಪಯಕಾರಿ. ಇದು ಸುರಕ್ಷತ ಮಾನದಂಡಗಳಿಗೆ ಉಲ್ಲಂಘನೆಯಾಗುತ್ತದೆ ಎಂದು ಸೈದಾಪುರ ಉಪ ತಹಸೀಲ್ದಾರ್ ಭೀಮಣ್ಣಗೌಡ ಪಾಟೀಲ್ ತಿಳಿಸಿದರು.

ಪಟ್ಟಣದಲ್ಲಿ ಅಕ್ರಮವಾಗಿ ಗೃಹ ಬಳಕೆಯ ಎಲ್‌ಪಿಜಿ ಸಿಲೆಂಡರ್ ಬಳಸುತ್ತಿದ ವಿವಿಧ ಹೋಟೆಲ್‌ಗಳ ಮೇಲೆ ಆಹಾರ ಇಲಾಖೆ ಅಧಿಕಾರಿಗಳು ಗುರುವಾರ ನಡೆಸಿದ ದಿಢೀರ್ ಕಾರ್ಯಚರಣೆಯ ನೇತೃತ್ವವಹಿಸಿ ಮಾತನಾಡಿದರು. ವಿವಿಧ ಹೋಟೆಲ್‌ಗಳಲ್ಲಿ ಗೃಹ ಬಳಕೆ ಸಿಲಿಂಡರ್ ಬಳಸುತ್ತಿರುವುದು ಪತ್ತೆಯಾಗಿದೆ. ಅವರ ವಿರುದ್ಧ ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸಿ, 9 ಸಿಲಿಂಡರ್‌ಗಳನ್ನು ಜಪ್ತಿ ಮಾಡಲಾಗಿದೆ. ಗ್ಯಾಸ್ ಏಜೆನ್ಸಿ ಹಾಗೂ ಹೋಟೆಲ್ ಮಾಲೀಕರಿಗೆ, ವ್ಯಾಪಾರಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಿದ್ದು, ಗೃಹ ಬಳಕೆಯ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸಬಾರದು ಎಂಬುದನ್ನು ತಿಳಿಸಲಾಯಿತು. ಗ್ಯಾಸ್ ಸಿಲಿಂಡರ್‌ಗಳ ದುರುಪಯೋಗ ಆಗದಂತೆ ಜನರಿಗೆ ಅರಿವು ಮೂಡಿಸುವ ಕೆಲಸ ಗ್ಯಾಸ್ ಏಜೆನ್ಸಿಗಳು ಮಾಡಬೇಕು ಎಂದು ತಾಕೀತು ಮಾಡಿದರು.

ನಮಗೆ ವಾಣಿಜ್ಯ ಸಿಲೆಂಡರ್ ನೀಡಿ: ಆಹಾರ ಇಲಾಖೆ ಅಧಿಕಾರಿಗಳು ಪಟ್ಟಣದ ರಸ್ತೆ ಬದಿಯಲ್ಲಿ ಹೊಟೇಲ್ ವ್ಯಾಪರ ಮಾಡುತ್ತಿರುವವರ ಮೇಲೆ ದಾಳಿ ಮಾಡಿ ಗೃಹ ಬಳಕೆ ಸಿಲೆಂಡರ್ ವಶಪಡಿಸಿಕೊಳ್ಳುವ ವೇಳೆ, ನಮ್ಮ ಸಿಲೆಂಡರ್ ನಮಗೆ ನೀಡಿ, ಇಲ್ಲವಾದರೆ ನಮ್ಮಗೆ ವಾಣಿಜ್ಯ ಸಿಲಿಂಡರ್‌ಗಳನ್ನು ನೀಡಿ ಹಣ ನೀಡುತ್ತೇವೆ ಎಂದು ಅಧಿಕಾರಿಗಳಿಗೆ ಹೋಟೆಲ್ ಮಾಲೀಕರು ತರಾಟೆಗೆ ತೆಗೆದುಕೊಂಡರು. ಸಿಲೆಂಡರ್ ಇಲ್ಲದಿದ್ದರೆ ನಾವು ಹೇಗೆ ವ್ಯಾಪಾರ ಮಾಡಬೇಕು, ನಮ್ಮ ಜೀವನ ಹೇಗೆ ಸಾಗಿಸಬೇಕು ಎಂದು ಅಧಿಕಾರಿಗಳ ಮುಂದೆ ತಮ್ಮ ಅಳಲನ್ನು ವ್ಯಕ್ತಪಡಿಸಿದರು.

ಈ ವೇಳೆ ಕಂದಾಯ ನಿರೀಕ್ಷಕ ದಸ್ತಗಿರಿ ನಾಯಕ್, ಆಹಾರ ಶಿರಸ್ತೇದಾರ್ ಮಹೇಶ ಎಮ್.ಜಿ, ಆಹಾರ ನಿರೀಕ್ಷಕ ವಿಠ್ಠಲ್ ಬಂದಾಲ್, ಶರಣಮ್ಮ ಸೇರಿದಂತೆ ಗ್ಯಾಸ್ ಏಜೇನ್ಸಿಯವರು ಇದ್ದರು.

# ಡಿಜಿಟಲ್ ಲಂಚಕ್ಕೆ ಲೋಕಾಯುಕ್ತರ ಬಲೆ: ಇಬ್ಬರು ಇಂಜಿನಿಯರ್‌ಗಳು ಬಂಧನ



**ಯಾದಗಿರಿ:ಏ.3:** ಕಾಮಗಾರಿಯ ಬಿಲ್ ಮಂಜೂರು ಮಾಡಲು ಲಂಚದ ಬೇಡಿಕೆ ಇಟ್ಟಿದ್ದ ಇಬ್ಬರು ಇಂಜಿನಿಯರ್‌ಗಳು ಕೊನೆಗೂ ಲೋಕಾಯುಕ್ತರ ಬಲೆಗೆ ಸಿಲುಕಿದ ಘಟನೆ ಜಿಲ್ಲೆಯಲ್ಲಿ ಸಂಚಲನ ಮೂಡಿಸಿದೆ. ವಿಶೇಷವೆಂದರೆ, ಲಂಚದ ಹಣವನ್ನು ನಗದು ರೂಪದಲ್ಲಿ ಅಲ್ಲದೆ ಡಿಜಿಟಲ್ ಪಾವತಿ ಮೂಲಕ ಸ್ವೀಕರಿಸಿರುವುದು ಪ್ರಕರಣಕ್ಕೆ ಹೊಸ ತಿರುವು ನೀಡಿದೆ.

ಶಹಾಪುರ ತಾಲ್ಲೂಕಿನ ಭೀಗುಡಿ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೆಬಿಜೆಎಸ್‌ಎಲ್ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮಧುಸೂದನ ಮತ್ತು ಜೂನಿಯರ್ ಇಂಜಿನಿಯರ್ ಮಂಜುನಾಥ ಅವರು ಕಾಮಗಾರಿ ಪೂರ್ಣಗೊಂಡಿದ್ದರೂ ಬಿಲ್ ಪಾಸ್ ಮಾಡಲು 35 ಸಾವಿರ ಲಂಚ ಕೇಳಿದ್ದರೆಂಬ ಆರೋಪ ಕೇಳಿಬಂದಿದೆ.

ವಡಗೇರಾ ತಾಲ್ಲೂಕಿನ ಗಡ್ಡೆಸೂಗುರಿನ ಖಾಸಿಂಸಾಬ್ ಜಲಾಲ್ ಸಾಬ್ ಅವರು ಈ ಬಗ್ಗೆ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು. ದೂರಿನ ಆಧಾರದ ಮೇಲೆ ಪೂರ್ವ ಯೋಜಿತ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು, ಲಂಚದ ಹಣವನ್ನು ಫೋನ್ ಪೇ ಮೂಲಕ ಸ್ವೀಕರಿಸುತ್ತಿದ್ದ ವೇಳೆ ಇಬ್ಬರನ್ನೂ ಸಿಕ್ಕಿಬೀಳಿಸಿದ್ದಾರೆ.

ಲೋಕಾಯುಕ್ತ ಎಸ್‌ಪಿ ಅವರ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಜೆ.ಹೆಚ್. ಇನಾಂದಾರ್ ನೇತೃತ್ವದ ತಂಡ ಸೂಕ್ತ ಪ್ಲ್ಯಾನ್ ರೂಪಿಸಿ ದಾಳಿ ನಡೆಸಿದ್ದು, ಆರೋಪಿಗಳನ್ನು ರೆಡ್ ಹ್ಯಾಂಡ್ ಆಗಿ ಬಂಧಿಸಿದೆ.

ಪ್ರಕರಣ ದಾಖಲಾಗಿದ್ದು, ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಡಿಜಿಟಲ್ ಮಾಧ್ಯಮಗಳ ಮೂಲಕ ಲಂಚ ಸ್ವೀಕಾರ ಮಾಡುವ ಹೊಸ ಪ್ರವೃತ್ತಿ ಕುರಿತು ಸಾರ್ವಜನಿಕ ವಲಯದಲ್ಲಿ ಚರ್ಚೆಗಳು ಆರಂಭವಾಗಿವೆ.

# ಕುರುಕುಂದಾ ಜಾತ್ರಾ ಮಹೋತ್ಸವಕ್ಕೆ ಭಕ್ತರ ಮಹಾಸಾಗರ: ರಥೋತ್ಸವಕ್ಕೆ ಸಾಕ್ಷಿಯಾದ ವೈಭವದ ಸಂಭ್ರಮ



**ಯಾದಗಿರಿ :ಏ.3:**ವಿಧಾನಸಭಾ ಕ್ಷೇತ್ರದ ಕುರುಕುಂದಾ ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ಮರೆಮ್ಮ ದೇವಿ ದೇವಾಲಯದ ಜಾತ್ರಾ ಮಹೋತ್ಸವ ಹಾಗೂ ಮೊದಲನೇ ವರ್ಷದ ರಥೋತ್ಸವವು ಭಕ್ತಿಭಾವ, ಸಾಂಸ್ಕೃತಿಕ ವೈಭವ ಮತ್ತು ಜನಸಾಗರದ ನಡುವೆ ಅದ್ದೂರಿಯಾಗಿ ನೆರವೇರಿತು. ಗ್ರಾಮವೇ ಹಬ್ಬದ ವಾತಾವರಣದಲ್ಲಿ ಮಿಂಚಿ, ಎಲ್ಲೆಡೆ ಭಕ್ತಿ, ಭರವಸೆ ಮತ್ತು ಸಂಭ್ರಮದ ಸಂಚಲನ ಕಂಡುಬಂತು.


ಈ ಮಹೋತ್ಸವದಲ್ಲಿ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯರಾದ ಮಹೇಶರಡ್ಡಿ ವೆಂಕಟರಡ್ಡಿ ಮುದ್ನಾಳ ಅವರು ಭಾಗವಹಿಸಿ ದೇವಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಗ್ರಾಮಸ್ಥರು ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು.

ರಥೋತ್ಸವದ ಸಂದರ್ಭದಲ್ಲಿ ಗ್ರಾಮದೆಲ್ಲೆಡೆ ಭಕ್ತರ ಘೋಷಣೆಗಳು ಮೊಳಗುತ್ತಾ, ಸಾಂಪ್ರದಾಯಿಕ ವಾದ್ಯಗೋಷ್ಠಿಗಳು, ಹರಕೆ ಹೊತ್ತ ಭಕ್ತರು ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜಾತ್ರೆಯ ಮೆರಗು ಹೆಚ್ಚಿಸಿತು. ಮಹಿಳೆಯರು, ಯುವಕರು ಹಾಗೂ ಹಿರಿಯರು ಉತ್ಸಾಹದಿಂದ ಪಾಲ್ಗೊಂಡು ಜಾತ್ರೆಯನ್ನು ಸಾರ್ಥಕಗೊಳಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖ ಮುಖಂಡರಾದ ಶರಣಪ್ಪಗೌಡ ಮಾಲಿ ಪಾಟೀಲ, ಪರಶುರಾಮ ಕುರುಕುಂದಿ, ಸಂತೋಷ ಹೊರಪೇಟಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಜೊತೆಗೆ ದೇವು ಗುಡ್ಡೆನೋರ, ದೇವು, ಭೀಮು ಸೇರಿದಂತೆ ಸ್ಥಳೀಯರು, ಯುವಕರು, ಮಹಿಳೆಯರು ಹಾಗೂ ಕಾರ್ಯಕರ್ತರು ಭಾರೀ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ವಿಶಿಷ್ಟ ಕಂಗೊಳ ನೀಡಿದರು.

ಒಟ್ಟಾರೆ, ಕುರುಕುಂದಾ ಜಾತ್ರಾ ಮಹೋತ್ಸವವು ಗ್ರಾಮೀಣ ಸಾಂಸ್ಕೃತಿಕ ಪರಂಪರೆ, ಭಕ್ತಿಭಾವ ಮತ್ತು ಸಮುದಾಯದ ಏಕತೆಯನ್ನು ಪ್ರತಿಬಿಂಬಿಸಿದ ಅದ್ಭುತ ಹಬ್ಬವಾಗಿ ಗಮನಸೆಳೆಯಿತು.

# ಬಾಗಲಕೋಟೆ ರಾಜಕೀಯ ಕಣ ಕಂಗೊಳಿಸಿದ ಕಾಂಗ್ರೆಸ್ ಪ್ರಚಾರ



**ಯಾದಗಿರಿ:ಏ.3:** ಬಾಗಲಕೋಟೆ ನಗರ ರಾಜಕೀಯ ಚಟುವಟಿಕೆಗಳಿಂದ ಕಂಗೊಳಿಸುತ್ತಿದ್ದು, ಚುನಾವಣಾ ಪ್ರಚಾರವು ಉತ್ಸಾಹದ ಉನ್ನತ ಹಂತ ತಲುಪಿದೆ. ಪೌರಾಡಳಿತ ಸಚಿವ ರಹೀಂ ಖಾನ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪರ ಭರ್ಜರಿ ಪ್ರಚಾರ ಅಭಿಯಾನ ನಡೆಯುತ್ತಿದ್ದು, ಕೆಪಿಸಿಸಿ ಸಂಯೋಜಕ ಹಾಗೂ ಕಿಸಾನ್ ಘಟಕದ ಪ್ರಧಾನ ಕಾರ್ಯದರ್ಶಿ ರಾಜ್ ಮೈನುದ್ದಿನ್ ಎಂ. ಜಮಾದಾರ್ ಸಕ್ರಿಯವಾಗಿ ಭಾಗವಹಿಸಿ ಅಭಿಯಾನಕ್ಕೆ ಮತ್ತಷ್ಟು ವೇಗ ನೀಡಿದ್ದಾರೆ.

ನಗರದ ಪ್ರಮುಖ ವಾರ್ಡ್‌ಗಳು ಹಾಗೂ ಮೊಹಲ್ಲಾಗಳಲ್ಲಿ ಮನೆಮನೆಗೆ ಭೇಟಿ ನೀಡಿದ ನಾಯಕರು, ಮತದಾರರೊಂದಿಗೆ ನೇರ ಸಂವಾದ ನಡೆಸಿ ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳು, ಅಭಿವೃದ್ಧಿ ಕಾರ್ಯಗಳು ಮತ್ತು ಭವಿಷ್ಯದ ದೃಷ್ಟಿಕೋಣವನ್ನು ಸಮಗ್ರವಾಗಿ ವಿವರಿಸಿದರು. ಮೊಹಲ್ಲಾ ಸಭೆಗಳು ಉತ್ಸಾಹಭರಿತವಾಗಿ ನಡೆದಿದ್ದು, ಸ್ಥಳೀಯ ಸಮಸ್ಯೆಗಳ ಕುರಿತು ಸಾರ್ವಜನಿಕರ ಮಾತುಗಳನ್ನು ಆಲಿಸಿ, ಅವುಗಳಿಗೆ ಶಾಶ್ವತ ಪರಿಹಾರ ಒದಗಿಸುವ ಭರವಸೆ ನೀಡಿದರು.

“ಸಮಗ್ರ ಅಭಿವೃದ್ಧಿ, ಸಮಾನತೆ ಮತ್ತು ಸಾಮಾಜಿಕ ನ್ಯಾಯ ಕಾಂಗ್ರೆಸ್‌ನ ಧ್ಯೇಯವಾಗಿದ್ದು, ಬಾಗಲಕೋಟೆ ನಗರದ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ ಅಗತ್ಯ” ಎಂದು ಸಚಿವ ರಹೀಂ ಖಾನ್ ಮನವಿ ಮಾಡಿದರು. ಇದೇ ವೇಳೆ ರಾಜ್ ಮೈನುದ್ದಿನ್ ಜಮಾದಾರ್ ಅವರು ಯುವಜನತೆ, ರೈತರು ಹಾಗೂ ಕಾರ್ಮಿಕ ವರ್ಗವನ್ನು ಉದ್ದೇಶಿಸಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಸಾಧನೆಗಳನ್ನು ಬಿಂಬಿಸಿದರು.

ಪ್ರಚಾರ ಯಾತ್ರೆಯಲ್ಲಿ ಸ್ಥಳೀಯ ಮುಖಂಡರು, ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳು ಭಾರೀ ಸಂಖ್ಯೆಯಲ್ಲಿ ಪಾಲ್ಗೊಂಡು, ಘೋಷಣೆಗಳೊಂದಿಗೆ ವಾತಾವರಣವನ್ನು ಉತ್ಸಾಹಭರಿತಗೊಳಿಸಿದರು. ಪ್ರಚಾರದ ಈ ಜೋರಿನಿಂದ ಬಾಗಲಕೋಟೆ ರಾಜಕೀಯ ವಾತಾವರಣ ದಿನದಿಂದ ದಿನಕ್ಕೆ ಕಾವೇರಿಸುತ್ತಿದ್ದು, ಕಾಂಗ್ರೆಸ್ ಪರ ಒಲವು ಹೆಚ್ಚುತ್ತಿರುವ ಲಕ್ಷಣಗಳು ಸ್ಪಷ್ಟವಾಗುತ್ತಿವೆ

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE